# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶುಕ್ರವಾರ, ಫೆಬ್ರವರಿ 28, 2025

ಸಂಪುಟ : 51 ಸಂಚಿಕೆ : 287 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

BSC ಸಂಸ್ಥೆವತಿಯಿಂದ ಪುರುಷರ ಫ್ಯಾಷನ್ ನಲ್ಲಿ ನೂತನ ಕೊಡುಗೆ.
ಎಲ್ಲವೂ 999/- ಒಳಗೆ ದೊರೆಯುವಂತೆ ಸೃಷ್ಟಿಸಿರುವ ಕರ್ನಾಟಕದ ಸ್ವಂತ ಬ್ರಾಂಡ್!

BSC® MEN'S WEAR

XPRESS
TRENDY, AFFORDABLE & YOURS
ಪುರುಷರ ಫ್ಯಾಷನ್ ಕೈಗೆಟಕುವ ಬೆಲೆಯಲ್ಲಿ

ಎಲ್ಲವೂ BELOW 999/-

GRAND OPENING OF OUR 1ST STORE

MARCH 1ST SATURDAY




RING ROAD, NEAR EDU ASIA SCHOOL DAVANAGERE

ALSO AVAILABLE ON 2ND FLOOR OF

2ND STORE OPENING SOON KALIKADEVI ROAD



2nd FLOOR BSC MEN'S STORE
PJ EXTENSION



2nd FLOOR BSC EXCLUSIVE
DENTAL COLLEGE ROAD

ಬಿ.ಎಸ್.ಚನ್ನಬಸಪ್ಪ & ಸನ್ಸ್
ದಾವಣಗೆರೆ

# ಜಪಾನ್‌ನಲ್ಲಿ ಸತತ ಒಂಭತ್ತನೇ ವರ್ಷ ಜನನ ದರ ಕುಸಿತ

ಟೋಕಿಯೋ, ಫೆ. 27 - ಜಪಾನ್‌ನಲ್ಲಿ ಸತತ ಒಂಭತ್ತನೇ ವರ್ಷ ಮಕ್ಕಳ ಜನನ ಸಂಖ್ಯೆ ಕುಸಿತವಾಗಿದೆ. 2024ರಲ್ಲಿ ಮಕ್ಕಳ ಜನನ ದರ ದಾಖಲೆ ಮಟ್ಟಕ್ಕೆ ಕುಸಿದಿದೆ ಎಂದು ಆರೋಗ್ಯ ಸಚಿವಾಲಯದ ವರದಿ ತಿಳಿಸಿದೆ.

ಜನನ ದರ ಹೆಚ್ಚಳಕ್ಕೆ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಆದರೆ, ಈ ಹಿಂದೆ ಅಂದಾಜಿಸಿದ್ದಕ್ಕಿಂತಲೂ ಹೆಚ್ಚಿನ ವೇಗದಲ್ಲಿ ಜನನ ದರ ಇಳಿಕೆಯಾಗಿದೆ. ಇದು ವೃದ್ಧರ ಸಂಖ್ಯೆ ಹೆಚ್ಚಾಗುತ್ತಿರುವ ಹಾಗೂ ಜನಸಂಖ್ಯೆ ಇಳಿಮುಖವಾಗುತ್ತಿರುವ ಜಪಾನ್‌ಗೆ ದೊಡ್ಡ ಸಮಸ್ಯೆಯಾಗಿದೆ.

2024ರಲ್ಲಿ ಜಪಾನ್‌ನಲ್ಲಿ 7,20,998 ಮಕ್ಕಳು ಜನಿಸಿವೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ. 5ರಷ್ಟು ಕಡಿಮೆಯಾಗಿದೆ. 1899 ರಲ್ಲಿ ಜಪಾನ್‌ನಲ್ಲಿ ಜನನ ದಾಖಲೆ ಸಂಗ್ರಹ ಆರಂಭವಾಗಿತ್ತು. ಆನಂತರ ಇಷ್ಟು ಕಡಿಮೆ ಮಕ್ಕಳು ಜನಿಸಿರುವುದು ಇದೇ ಮೊದಲು.

ಜಪಾನ್ ನಿರೀಕ್ಷಿಸಿದ 15 ವರ್ಷ ಮೊದಲೇ ಜನನ ದರ ಈ ಹಂತಕ್ಕೆ ಬಂದಿದೆ.

ಈ ವರ್ಷದಲ್ಲಿ ಮಕ್ಕಳ ಜನನ ಸಂಖ್ಯೆ 7 ಲಕ್ಷಕ್ಕೂ ಕಡಿಮೆಯಾಗುವ ಸಾಧ್ಯತೆ ಇದೆ.

ದಕ್ಷಿಣ ಕೊರಿಯಾದಲ್ಲಿ 9 ವರ್ಷಗಳ ನಂತರ ಮೊದಲ ಬಾರಿಗೆ ಮಕ್ಕಳ ಜನನ ದರ ಏರಿಕೆಯಾಗಿದೆ.

ಕೊರೊನಾ ಕಾರಣದಿಂದ ದಕ್ಷಿಣ ಕೊರಿಯಾದಲ್ಲಿ ಹಲವರು ಮದುವೆಗಳನ್ನು ಮುಂದೂಡಿದ್ದರು. ಹೀಗಾಗಿ ಈ ವರ್ಷ ಮಕ್ಕಳ ಜನನ ಪ್ರಮಾಣ ಹೆಚ್ಚಾಗಿದೆ ಎನ್ನಲಾಗುತ್ತಿದೆ.

ಜಪಾನ್‌ನಲ್ಲಿ ಕಳೆದ ವರ್ಷ 5 ಲಕ್ಷ ಮದುವೆಗಳಾಗಿವೆ. 2023 ಕ್ಕೆ ಹೋಲಿಸಿದರೆ ಇದು ಶೇ. 2.2ರಷ್ಟು ಹೆಚ್ಚಳವಾಗಿದೆ. 2023ರಲ್ಲಿ ಮದುವೆ ಸಂಖ್ಯೆ 90 ವರ್ಷಗಳಲ್ಲಿ ಅತಿ ಕಡಿಮೆ ಇತ್ತು.

ಆರ್ಥಿಕ ಸುಧಾರಣೆ, ಉದ್ಯೋಗಾವಕಾಶ ಹೆಚ್ಚಳ ಹಾಗೂ ಲಿಂಗ ಸಮಾನತೆಗಳಿಂದ ಯುವ ಪೀಳಿಗೆ ಮದುವೆ ಮತ್ತು ಮಕ್ಕಳ ಕಡೆ ಆಸಕ್ತಿ ತೋರಲು ನೆರವಾಗಲಿದೆ ಎಂದು ಪರಿಣಿತರು ಹೇಳಿದ್ದಾರೆ.

ಉದ್ಯೋಗಾವಕಾಶಗಳ ಕೊರತೆ ಕಾರಣದಿಂದಾಗಿ ಜಪಾನ್ ಯುವ ಪೀಳಿಗೆ ಮದುವೆ ಮದುವೆಯಾಗಲು ಹಿಂಜರಿಯುತ್ತಿದ್ದಾರೆ ಎಂದು ಸಮೀಕ್ಷೆಗಳು ತಿಳಿಸಿವೆ. ವೇತನಕ್ಕಿಂತ ಖರ್ಚುಗಳು ಹೆಚ್ಚಾಗುತ್ತಿವೆ, ಕಾರ್ಪೋರೇಟ್ ಸಂಸ್ಕೃತಿ ಕಾರಣದಿಂದಾಗಿ ಗಂಡ - ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ಇದೆಲ್ಲವೂ ಜಪಾನ್ ಸಮಸ್ಯೆ ಹೆಚ್ಚಿಸಿವೆ.

# ಗೋಡ್ಸೆ ಪ್ರಶಂಶಿಸಿದ ಪ್ರಾಧ್ಯಾಪಕಿಗೆ ಡೀನ್ ಸ್ಥಾನ : ಕಾಂಗ್ರೆಸ್ ತರಾಟೆ

ನವದೆಹಲಿ, ಫೆ. 27 - ಮಹಾತ್ಮ ಗಾಂಧೀಜಿ ಹಂತಕ ನಾಥೂರಾಮ್ ಗೋಡ್ಸೆ ಅವರನ್ನು ಪ್ರಶಂಸಿಸಿದ ಉಪನ್ಯಾಸಕಿಯನ್ನು ಡೀನ್ ಆಗಿ ನೇಮಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

ಗಾಂಧೀಜಿ ಕಡೆಗಣಿಸಿ ಗೋಡ್ಸೆ ವೈಭವಿಕರಿಸುವ ಸರ್ಕಾರದ ಮನೋಭಾವದ ಅಂಗವಾಗಿ ಕ್ಯಾಲಿಕಟ್ ಎನ್.ಐ.ಟಿ.ಯ ಯೋಜನಾ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಆಗಿ ಡಾ. ಶೈಜಾ ಅವರನ್ನು ನೇಮಿಸ ಲಾಗಿದೆ ಎಂದು ಕಾಂಗ್ರೆಸ್ ಟೀಕಿಸಿದೆ.

ಮಹಾತ್ಮ ಗಾಂಧೀಜಿ ಹುತಾತ್ಮರಾದ ದಿನದಂದು ನಾಥುರಾಮ್ ಗೋಡ್ಸೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ ಆರೋಪದ ಮೇಲೆ ಪ್ರಾಧ್ಯಾಪಕಿ ಮೇಲೆ ಪೊಲೀಸ್ ದೂರು ದಾಖಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಗೋಡ್ಸೆ ಭಾರತವನ್ನು ರಕ್ಷಿಸಿದ ಬಗ್ಗೆ ಹೆಮ್ಮೆ ಇದೆ ಎಂದು ಹೇಳಿದ ಉಪನ್ಯಾಸಕಿಯನ್ನು ಮೋದಿ ಸರ್ಕಾರ ಕ್ಯಾಲಿಕಟ್ ಎನ್.ಐ.ಟಿ.ಯ ಡೀನ್ ಆಗಿ ನೇಮಿಸಿದೆ ಎಂದಿದ್ದಾರೆ.

ಮಹಾತ್ಮ ಗಾಂಧೀಜಿ ಹಾಗೂ ನಾಥೂರಾಮ್ ಗೋಡ್ಸೆ ಅವರ ನಡುವೆ ಆಯ್ಕೆ ಮಾಡಿಕೊಳ್ಳಲಾಗದು ಎಂದು ಹೇಳಿದ ಕೊಲ್ಕತಾ ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ಈಗ ಬಿಜೆಪಿ ಸಂಸದರಾಗಿದ್ದಾರೆ. ಇದೆಲ್ಲವೂ ಮೋದಿ ಸರ್ಕಾರದ ಮನೋಭಾವವಾಗಿದೆ ಎಂದು ರಮೇಶ್ ಹೇಳಿದ್ದಾರೆ.

ಶೈಜಾ ಅವರ ವಿರುದ್ಧ ಹಲವು ಸಂಘಟನೆಗಳು ದೂರು ದಾಖಲಿಸಿದ್ದವು. ಈ ಹಿನ್ನೆಲೆಯಲ್ಲಿ ಕಳೆದ ವರ್ಷ ಫೆಬ್ರವರಿಯಲ್ಲಿ ಪೊಲೀಸರು ಅವರನ್ನು ಪ್ರಶ್ನಿಸಿದ್ದರು.

ಶೈಜಾ ನೇಮಕಾತಿಯನ್ನು ವಿರೋಧಿಸಿರುವ ಸಿಪಿಐ(ಎಂ) ಯುವ ಘಟಕವಾದ ಡಿ.ವೈಎಫ್.ಐ., ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದೆ.

## ನಗರದಲ್ಲಿ ಇಂದಿನಿಂದ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ

ದಾವಣಗೆರೆ, ಫೆ. 27- ಜಿಲ್ಲಾ ಅಮೆಚೂರು ಕಬಡ್ಡಿ ಸಂಸ್ಥೆ, ಸೃಷ್ಠಿ ಕಬಡ್ಡಿ ಅಕಾಡೆಮಿ ಹಾಗೂ ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 28 ರಿಂದ ಮಾರ್ಚ್ 2 ರವರೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪ್ರೀಮಿಯರ್ ಲೀಗ್ ಪಂದ್ಯಾವಳಿ ನಡೆಯಲಿದೆ ಎಂದು ಜನಪ್ರಿಯ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ 28 ರಂದು ಸಂಜೆ 6 ಗಂಟೆಗೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಪಂದ್ಯಾವಳಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಜಿ.ಪಂ.ಸಿಇಓ ಸುರೇಶ್ ಬಿ. ಇಟ್ನಾಳ್, ಶ್ರೀನಿವಾಸ ಶಿವಗಂಗಾ, ಎಂ. ದೊಡ್ಡಪ್ಪ, ಕುರುಡಿ ಗಿರೀಶ, ಎಂ. ನಾಗರಾಜ್, ಕಬಡ್ಡಿ ಮಲ್ಲು, ಹೆಚ್. ಚಂದ್ರಪ್ಪ ಭಾಗವಹಿಸಲಿದ್ದಾರೆ.

ಪ್ರತಿ ದಿನವೂ ಸಂಜೆ 6 ರಿಂದ ಹೊನಲು ಬೆಳಕಿನ ಕಬಡ್ಡಿ ಪಂದ್ಯಗಳನ್ನು ಪ್ರಾರಂಭಿಸಲಾಗುವುದು. ಲೀಗ್ ಮಾದರಿಯಲ್ಲಿ ಪ್ರತಿ ದಿನ 10 ಪಂದ್ಯಗಳನ್ನು ನಡೆಸಲಾಗುವುದು. ಒಟ್ಟು 24 ಲೀಗ್ ಪಂದ್ಯಗಳನ್ನು ಹಾಗೂ ಲೀಗ್ ನಲ್ಲಿ ಟಾಪ್ 4 ಮಾದರಿಯಲ್ಲಿ ಆಡಿಸಲಾಗುವುದು ಎಂದರು.

ಅಂದು ಮಧ್ಯಾಹ್ನ 2 ಗಂಟೆಯಿಂದ ಜಯದೇವ ವೃತ್ತದಿಂದ ಜಿಲ್ಲಾ ಕ್ರೀಡಾಂಗಣದವರೆಗೆ ಕಬಡ್ಡಿ ಪಟುಗಳು, ಕ್ರೀಡಾ ಪ್ರೋತ್ಸಾಹಕರು, ಅಭಿಮಾನಿಗಳಿಂದ ಮೆರವಣಿಗೆ ನಡೆಯಲಿದೆ ಎಂದು ಹೇಳಿದರು.

ವಿಜೇತ ತಂಡಗಳಿಗೆ ಪ್ರಥಮ ಎರಡು ಲಕ್ಷ, ದ್ವಿತೀಯ ಒಂದು ಲಕ್ಷ, ತೃತೀಯ ಮತ್ತು ಚತುರ್ಥ ಬಹುಮಾನ ತಲಾ 25 ಸಾವಿರ ರೂ. ಗಳನ್ನು ನೀಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ದೊಡ್ಡಪ್ಪ, ಎಂ. ನಾಗರಾಜ್, ಕಬಡ್ಡಿ ಮಲ್ಲು, ಹೆಚ್. ಚಂದ್ರಪ್ಪ, ಪ್ರಭು, ರಾಕೇಶ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿಂದು ವಿಜ್ಞಾನ ರಸ ಪ್ರಶ್ನೆ ಸ್ಪರ್ಧೆ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವತಿಯಿಂದ ಬಿಐಇಟಿ ಕಾಲೇಜಿನ ಜೈವಿಕ ತಂತ್ರಜ್ಞಾನ ವಿಭಾಗದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಮಟ್ಟದ ಪ್ರಶಿಕ್ಷಣಾರ್ಥಿಗಳ ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮ ನಡೆಯಲಿದೆ.

ಬಿಐಇಟಿ ನಿರ್ದೇಶಕ ವೈ. ವೃಷಭೇಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿಜ್ಞಾನ ಪರಿಷತ್ತಿನ ಗೌರವಾಧ್ಯಕ್ಷ ಡಾ.ಜೆ.ಬಿ. ರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಎಂ.ಆರ್. ಜಗದೀಶ್, ಗುರುಪ್ರಸಾದ್, ಎಲ್.ಎಂ. ವಾಗೀಶ್, ಗಿರೀಶ್, ಡಾ. ಅನಿಲ್ ಕುಮಾರ್, ಅಂಗಡಿ ಸಂಗಪ್ಪ, ಕೆ.ಸಿದ್ದೇಶ್, ಟಿ. ಸುರೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ನಗರದ ಲೇಬರ್ ಕಾಲೋನಿಯಲ್ಲಿ ಇಂದಿನಿಂದ ಶಿವರಾತ್ರಿ ಜಾಗರಣೆ

ಲೇಬರ್ ಕಾಲೋನಿ 6ನೇ ತಿರುವಿನಲ್ಲಿರುವ (ಕೆಎಸ್ಸಾರ್ಟಿಸಿ ಬಸ್ ಸ್ಟ್ಯಾಂಡ್ ರಸ್ತೆ) ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಬರುವ ಮಾರ್ಚ್ 4ರ ವರೆಗೆ ದೇವಸ್ಥಾನದಲ್ಲಿ 57ನೇ ವರ್ಷದ ಶಿವರಾತ್ರಿ ಜಾಗರಣೆ ಮಹೋತ್ಸವ ನಡೆಯಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಮಹಾರುದ್ರಾಭಿಷೇಕ ಸಂಜೆ 7 ಗಂಟೆಗೆ ಭಜನಾ ಕಾರ್ಯಕ್ರಮದೊಂದಿಗೆ ಜಾಗರಣೆ ನಡೆಯಲಿದೆ. ನಾಳೆ ಶನಿವಾರ ಬೆಳಗ್ಗೆ 8 ಗಂಟೆಗೆ ಮಹಾಪೂಜೆ ನಂತರ ವಾದ್ಯ ವೈಭವಗಳೊಂದಿಗೆ ಸ್ವಾಮಿಯ ಮೆರವಣಿಗೆ ಹಾಗೂ ಮಧ್ಯಾಹ್ನ ಪ್ರಸಾದ ವಿನಿಯೋಗ ನಡೆಯಲಿದೆ.

ನಾಡಿದ್ದು ಭಾನುವಾರ 8 ಗಂಟೆಗೆ ಸ್ವಾಮಿಗೆ ಪೂಜೆ ಪಳಾರ ಹಾಕಿಸುವುದು. 4ರಂದು ಸಂಜೆ ಪೂಜೆ ನಡೆಯಲಿದ್ದು, ನಂತರ ಪಳಾರ ವಿತರಣೆ ನಡೆಯಲಿದೆ.

## ಎಫ್‌ಐಆರ್ ಇಲ್ಲದಿದ್ದರೂ ಜಿಎಸ್‌ಟಿ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು : ಸುಪ್ರೀಂ

ನವದೆಹಲಿ, ಫೆ. 27 - ಜಿಎಸ್‌ಟಿ ಕಾಯ್ದೆ ಹಾಗೂ ಸುಂಕ ಕಾಯ್ದೆಗಳಿಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗದಿದ್ದರೂ ಸಹ ಸಂಬಂಧಿಸಿದ ವ್ಯಕ್ತಿಗಳು ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಬೇಲ ಎಂ. ತ್ರಿವೇದಿ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದೆ.

ರಾಧಿಕಾ ಅಗರ್ವಾಲ್ ಎಂಬುವವರು 2018ರಲ್ಲಿ ದಾಖಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

## ನಗರದಲ್ಲಿ ಇಂದು ರಾಷ್ಟ್ರೀಯ ವಿಜ್ಞಾನ ದಿನ

ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ 'ರಾಷ್ಟ್ರೀಯ ವಿಜ್ಞಾನ ದಿನಚರಣೆ ಕಾರ್ಯಕ್ರಮ ನಡೆಯಲಿದೆ.

ದಾವಣಗೆರೆ ವಿವಿ ರಸಾಯನ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಬಿ.ಪಿ. ನಂದೀಶ್ವರಪ್ಪ, ವಿಜ್ಞಾನಿ ಡಾ.ಜಿ.ಕೆ ಮಧುಕೇಶ್, ಕಾಲೇಜಿನ ಪ್ರಾಚಾರ್ಯರಾದ ಡಾ.ಎ.ಜೆ. ನೀತಾ ಹಾಗೂ ಸಹಾಯಕ ಪ್ರಾಧ್ಯಾಪಕ ಕೆ. ಮುರುಗೇಶ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

## ಓದುಗರ ಪತ್ರ

### ಹೆಲ್ಮೆಟ್ ಬೇಡ ಎನ್ನುವುದು ಸರಿಯಲ್ಲ !

**ಮಾನ್ಯರೇ,**

ನಗರದಲ್ಲಿ ಹಾಫ್ ಹೆಲ್ಮೆಟ್ ಧರಿಸುವ ಸವಾರರನ್ನು ತಡೆಹಿಡಿದು, ಪೂರ್ತಿ ಹೆಲ್ಮೆಟ್ ಧರಿಸಬೇಕೆಂದು ಟ್ರಾಫಿಕ್ ಪೊಲೀಸರು ಜನತೆಗೆ ತಿಳಿ ಹೇಳುತ್ತಿದ್ದಾರೆ. ಮೋಟಾರ್ ವಾಹನಗಳ ಕಾಯ್ದೆಯ ಕಲಂ 129ರಲ್ಲಿ ನಾಲ್ಕು ವರ್ಷದ ಮೇಲಿನ ಪ್ರತಿಯೊಬ್ಬ ವ್ಯಕ್ತಿಯೂ ಮೋಟಾರು ಸೈಕಲನ್ನು ಸಾರ್ವಜನಿಕ ಸ್ಥಳಗಳಲ್ಲಿ ಚಲಾಯಿಸುವಾಗ ಅಥವಾ ಸಾಗುವಾಗ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಗುಣಮಟ್ಟದ ಶಿರಸ್ತ್ರಾಣವನ್ನು ಧರಿಸಬೇಕಾಗುತ್ತದೆ.

ಈ ಕಾನೂನಿನ ಅಂಶದಲ್ಲಿ ಗುಣಮಟ್ಟದ ಶಿರಸ್ತ್ರಾಣ ಎಂದು ತಿಳಿಸಿದೆ. ಇದರರ್ಥ ಹಾಫ್ ಹೆಲ್ಮೆಟ್ ಎಂಬ ಪರಿಕಲ್ಪನೆಯೇ ಇರುವುದಿಲ್ಲ. ಹೆಲ್ಮೆಟ್ ಧರಿಸದೇ ಚಲಾಯಿಸಿದ್ದಲ್ಲಿ ಇದೇ ಕಾನೂನಿನ ಕಲಂ 194 ಡಿ ಪ್ರಕಾರ ಒಂದು ಸಾವಿರ ರೂಪಾಯಿಗಳ ದಂಡ ಮತ್ತು ಮೂರು ತಿಂಗಳ ತನಕ ಲೈಸೆನ್ಸನ್ನು ತಡೆಹಿಡಿಯಬಹುದಾಗಿದೆ.

ಕಾನೂನನ್ನು ಬದಿಗಿಟ್ಟು ಚರ್ಚಿಸುವುದಾದರೆ ಜೀವ ರಕ್ಷಣೆಗಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುವುದು ಒಳಿತಲ್ಲವೇ? ಹಾಫ್ ಹೆಲ್ಮೆಟ್ ಧರಿಸಿದಾಗ ಜೋರು ಗಾಳಿಬಂದರೆ ಅದು ಹಾರಿ ಹೋಗಿ ಹಿಂಬದಿಯಲ್ಲಿರುವ ಸವಾರರಿಗೂ ಉಪದ್ರವಾಗುತ್ತದೆ. ಈ ಬೇಸಿಗೆ ಕಳೆಯುವ ತನಕ ಪೂರ್ತಿ ಹೆಲ್ಮೆಟ್ ಧರಿಸದೇ ಇರುವ ಸವಾರರ ವಿರುದ್ಧ ಕ್ರಮ ಕೈಗೊಳ್ಳಬಾರದೆಂದು ಚರ್ಚೆಗಳು ಆಗುತ್ತಿವೆ. ಪೂರ್ತಿ ಹೆಲ್ಮೆಟ್ ಧರಿಸಿದ್ದರಿಂದ ಅಪಘಾತದಲ್ಲಿ ತಲೆಗೇನೂ ಪೆಟ್ಟಾಗಲಿಲ್ಲ ಎಂದು ಹೇಳಿದ್ದವರನ್ನು ಕಂಡಿದ್ದೇವೆ. ಹೀಗಿರುವಾಗ ಯಮ ಧರ್ಮನಿಗೆ ಬೇಸಿಗೆ, ಮಳೆ, ಚಳಿ ಎಂದು ಭೇದಭಾವ ಇದೆಯೇ? ಹೆಲ್ಮೆಟ್ ಬೇಡವೇ ಬೇಡ ಎನ್ನುವವರ ಅಭಿಪ್ರಾಯದ ಬದಲಿಗೆ, ಪೂರ್ತಿ ಹೆಲ್ಮೆಟ್ ಬಳಸುವ ರೂಢಿಯನ್ನು ಮಾಡಿಸಲೇಬೇಕಿದೆ ಹೊರತು, ಬೇಸಿಗೆ ಕಳೆಯಲಿ, ನಂತರದಲ್ಲಿ ನೋಡೋಣ ಎಂಬುದು ಅಸಂಬದ್ಧವೇ ಸರಿ.

- **ವೈ. ವಾದಿರಾಜ ಭಟ್**, ವಕೀಲರು, ದಾವಣಗೆರೆ.

## ಜಿಲ್ಲೆಯಲ್ಲಿ 1500 ಪ್ಲಾಸ್ಟಿಕ್, ಅರ್ಧ ಹೆಲ್ಮೆಟ್ ವಶಕ್ಕೆ : ಎಸ್ಪಿ ಎಚ್ಚರ



ದಾವಣಗೆರೆ, ಫೆ.27- ಜಿಲ್ಲಾ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಅವರ ಸೂಚನೆ ಮೇರೆಗೆ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ.ಸಂತೋಷ್, ಜಿ.ಮಂಜುನಾಥ್ ಹಾಗೂ ನಗರ ಡಿವೈಎಸ್ಪಿ ಶರಣ ಬಸವೇಶ್ವರ ಅವರುಗಳ ಮಾರ್ಗದರ್ಶನದಲ್ಲಿ ಸಿಪಿಐ ನಲವಾಗಲು ಮಂಜುನಾಥ್ ಅವರ ನೇತೃತ್ವದಲ್ಲಿ ಸುರಕ್ಷಿತವಲ್ಲದ ಪ್ಲಾಸ್ಟಿಕ್ ಮತ್ತು ಅರ್ಧ ಹೆಲ್ಮೆಟ್‌ಗಳನ್ನು ಇಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಅಂಗಡಿಗಳಲ್ಲಿ ಸುಮಾರು 1500 ಪ್ಲಾಸ್ಟಿಕ್, ಅರ್ಧ ಹೆಲ್ಮೆಟ್‌ಗಳನ್ನು ನಾಶಪಡಿಸುವ ಉದ್ದೇಶಕ್ಕಾಗಿ ವಶಕ್ಕೆ ಪಡೆಯಲಾಯಿತು.

ಈ ಸಂದರ್ಭದಲ್ಲಿ ದಕ್ಷಿಣ ಮತ್ತು ಉತ್ತರ ಸಂಚಾರ ಠಾಣೆ ಪಿಎಸ್‌ಐ, ಎಎಸ್‌ಐ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಇನ್ನೂ ಮುಂದೆ ಪ್ಲಾಸ್ಟಿಕ್ ಹಾಗೂ ಅರ್ಧ ಹೆಲ್ಮೆಟ್‌ಗಳನ್ನು ಮಾರಾಟ ಮಾಡಬಾರದು ಎಂದು ಎಸ್ಪಿ ಉಮಾ ಪ್ರಶಾಂತ್ ಅವರು ಎಚ್ಚರಿಸಿದ್ದಾರೆ.

# ಊರಮ್ಮ ದೇವಿ ಜಾತ್ರೆ ಮುಂಜಾಗ್ರತಾ ಕ್ರಮ

**(5ನೇ ಪುಟದಿಂದ)** ನಿರ್ಮಾಣ ಮಾಡಬೇಕು, ಮತ್ತು ಕಸದ ಸಾಗಣೆಯ ವಾಹನಗಳು ಕೂಡ ಕಡಿಮೆ ಇರುವುದರಿಂದ, ಹಬ್ಬದ ಸಮಯದಲ್ಲಿ ಬಾಡಿಗೆ ಟ್ರ್ಯಾಕ್ಟರ್ ಮೂಲಕ ಕಸವನ್ನು ಸಾಗಣೆ ಮಾಡಲು ಮುಂದಾಗುವಂತೆ ಹೇಳಿದರು.

ನಗರಸಭೆ ನಾಮನಿರ್ದೇಶನ ಸದಸ್ಯ ಕೆ.ಬಿ. ರಾಜಶೇಖರ್ ಮಾತನಾಡಿ, ಉತ್ಸವ ಸಮಿತಿಯ ಅಧ್ಯಕ್ಷ ಹಾರ್ನಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ, ಖಜಾಂಚಿ ಕೆಂಚಪ್ಪ ದೊಡ್ಡಮನೆ, ನಗರಸಭೆ ಸದಸ್ಯ ವಸಂತ ಮಾತನಾಡಿ ಸಲಹೆ ನೀಡಿದರು.

ನಗರಸಭೆ ಸದಸ್ಯ ಬಾಬುಲಾಲ್ ಮಾತ ನಾಡಿ, ಹಬ್ಬದ ಸಮಯದಲ್ಲಿ ಸಾರ್ವಜನಿಕರ ಆರೋಗ್ಯದಲ್ಲಿ ಸಮಸ್ಯೆಗಳು ಬಂದಾಗ, ನಮ್ಮ ಅಂಜುಮಾನ್ ಇಸ್ಲಾಮಿಯಾ ಆಂಬ್ಯುಲೆನ್ಸ್ ವಾಹನ ಸೇವೆ ಸಲ್ಲಿಸಲು ಸಿದ್ದವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ಸದಸ್ಯರಾದ ಆರ್.ಸಿ. ಜಾವೇದ್, ಕೆ.ಜಿ. ಸಿದ್ದೇಶ್, ರತ್ನ ಡಿ. ಉಜ್ಜೇಶ್, ಲಕ್ಷ್ಮಿ ಮೋಹನ್ ದುರುಗೋಜಿ, ಪಕ್ಕೀರಮ್ಮ, ಸುಮಿತ್ರಮ್ಮ, ಹನುಮಂತಪ್ಪ, ರಜನಿಕಾಂತ್, ನಾಗರತ್ನ, ಅಬ್ದುಲ್ ಅಲಿಂ, ಮುಜಾಮಿಲ್ ಬಿಲ್ಲು, ಬಿ ಅಲ್ತಾಫ್, ನಾಮನಿರ್ದೇಶನ ಸದಸ್ಯ ದಿವಾಕರ್, ನಗರಸಭೆ ಎಇಇ ವಿನಯ್ ಕುಮಾರ್, ಮ್ಯಾನೇಜರ್ ನಿರಂಜನಿ, ಆರೋಗ್ಯ ಇಲಾಖೆ ರವಿಪ್ರಕಾಶ್, ಆರ್.ಐ. ರಮೇಶ್, ಕೇಸ್ ವರ್ಕರ್ ರಾಮು, ಪರಸಪ್ಪ, ಗಾಯತ್ರಿ, ಲೆಕ್ಕಾಧಿಕಾರಿ ನಾಗರಾಜ್, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಚನ್ನಬಸಪ್ಪ ಗೌಡ್ರು ಉತ್ಸವ ಸಮಿತಿಯ ಅಧ್ಯಕ್ಷ ಮಂಜುನಾಥ್ ಹಾರ್ನಳ್ಳಿ, ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ, ಖಜಾಂಚಿ ಕೆಂಚಪ್ಪ ದೊಡ್ಡಮನಿ, ಸಹ ಕಾರ್ಯದರ್ಶಿ ಸಿದ್ದಪ್ಪ ಶಾನಭೋಗರ ಗಿರೀಶ್, ಬಣಕಾರ ಆಂಜನೇಯ, ಮಾರುತಿ ವಕೀಲರು, ವಿನಾಯಕ ಆರಾಧ್ಯಮಠ ಇತರರು ಹಾಜರಿದ್ದರು.

ಜಾತ್ರೆಯ ಅಂಗವಾಗಿ ನಗರದ ಶಿವಮೊಗ್ಗ ರಸ್ತೆ ಮತ್ತು ದೊಡ್ಡಿಬೀದಿ ಬಡಾವಣೆಯಲ್ಲಿ ನಡೆಯುವ ಸಂತೆಯನ್ನು ಮುಂದಿನ ಮಂಗಳವಾರದಿಂದ ಎಪಿಎಂಸಿ ಆವರಣಕ್ಕೆ ಸ್ಥಳಾಂತರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

## ತರಳಬಾಳು ಹುಣ್ಣಿಮೆ : ಯಶಸ್ವಿಗೆ ಶ್ರಮಿಸಿದ ಕಾರ್ಯಕರ್ತರಿಗೆ ಅಭಿನಂದಿಸಲು ಇಂದು ಸಭೆ



ಭರಮಸಾಗರದಲ್ಲಿ ಈಚೆಗೆ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದ ಯಶಸ್ಸಿಗೆ ಶ್ರಮಿಸಿದ ಎಲ್ಲಾ ಸಮಿತಿ ಮತ್ತು ಕಾರ್ಯಕರ್ತರನ್ನು ಅಭಿನಂದಿಸಲು ಇಂದು ಬೆಳಿಗ್ಗೆ 11ಕ್ಕೆ ಭರಮಸಾಗರದ ನಿರಂಜನಮೂರ್ತಿಯವರ ಕಲ್ಯಾಣ ಮಂಟಪದಲ್ಲಿ ಶ್ರೀ ಜಗದ್ಗುರುಗಳವರ ಸಮ್ಮುಖದಲ್ಲಿ ಸಭೆಯನ್ನು ಕರೆಯಲಾಗಿದೆ ಎಂದು ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

## ಪ್ಲಾಸ್ಟಿಕ್ ನಿಷೇಧ

**(5ನೇ ಪುಟದಿಂದ)** ಕ್ಯಾನ್ಸರ್ ರೋಗಕ್ಕೆ ಮೂಲ ಕಾರಣ ಎಂದು ತಜ್ಞರು ಹೇಳಿದ್ದಾರೆ. ತಜ್ಞರು ನೀಡಿರುವ ಶಿಫಾರಸ್ಸಿನ ಮೇರೆಗೆ ಆಹಾರ ಪದಾರ್ಥಗಳ ಉತ್ಪಾದನಾ ಕೇಂದ್ರ, ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಪ್ಲಾಸ್ಟಿಕ್ ನಿಷೇಧ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಗುಂಡೂರಾವ್ ತಿಳಿಸಿದರು.

# ಅಕ್ರಮ ಪಂಪ್‌ಸೆಟ್‌ಗಳ ತೆರವು, ಭೈರನಪಾದ ಏತ ನೀರಾವರಿ ಜಾರಿ

**(5ನೇ ಪುಟದಿಂದ)** ಜನರ ಪರವಾಗಿ ಹೋರಾಟ ಮಾಡಬೇಕು. ಅಕ್ರಮ ಪಂಪ್‌ಸೆಟ್‌ಗಳ ತೆರವಿಗಾಗಿ ನಾವು ಹೈಕೋರ್ಟ್‌ಗೆ ಹೋಗಿ ಕೇಸ್ ಗೆದ್ದಿದ್ದೇವೆ. ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ಹೈಕೋರ್ಟ್ ಆದೇಶ ಮಾಡಿರುವುದನ್ನು ಜಾರಿಗೊಳಿಸಲು ನೀವು ಹೋರಾಟ ಮಾಡಿ, ಕೊನೆ ಭಾಗದ ರೈತರಿಗೆ ನೀರು ತಲುಪಿಸಿ ಎಂದು ಹರೀಶ್ ಅವರಿಗೆ ಹಾಲೇಶ್ ಒತ್ತಾಯಿಸಿದಾಗ, ಸಭೆಯಲ್ಲಿದ್ದವರೂ ಧ್ವನಿ ಗೂಡಿಸಿದರು.

ಆಗ ಉತ್ತರ ನೀಡಿದ ಶಾಸಕ ಹರೀಶ್, ನಾನೂ ಸಹ 1980 ರಿಂದ ರೈತನಾಗಿ ಭತ್ತ, ತೋಟ ಮಾಡಿದ್ದೇನೆ. ಭದ್ರಾ ನೀರಿಗಾಗಿ ನಾವು ಅಂದಿನಿಂದಲೂ ಹೋರಾಟ ಮಾಡುತ್ತಾ ಬಂದಿದ್ದೇವೆ. ಭದ್ರಾ ಕಾಡಾ ಅಧ್ಯಕ್ಷನಾಗಿ, ರೈತರ ಪರ ಕೆಲಸ ಮಾಡಿದ್ದೇನೆ. ನಾನು ತರಳಬಾಳು ಹುಣ್ಣಿಮೆಯಲ್ಲಿ ಮಾತನಾಡಿರುವ ಮಾತಿನ ಅರ್ಥ ಬೇರೆನೇ ಇದೆ. ಅದು ನಿಮಗೆ ಅರ್ಥವಾಗಿಲ್ಲ. ಹರಿಹರ ತಾಲ್ಲೂಕಿನಲ್ಲಿ ಹರಿಯುವ ತುಂಗಭದ್ರಾ ನದಿಯಿಂದ ದೂರದ ತಾಲ್ಲೂಕುಗಳಿಗೆ ನೀರು ತೆಗೆದುಕೊಂಡು ಹೋಗಿದ್ದಾರೆ. ನಮ್ಮ ತಾಲ್ಲೂಕು ಹೆಸರಿಗಷ್ಟೇ ಭದ್ರಾ ಅಚ್ಚುಕಟ್ಟಿಗೆ ಸೇರಿದೆ. ಆದರೆ, ನೀರು ಮಾತ್ರ ಕೊನೆ ಭಾಗಕ್ಕೆ ಹರಿಯುತ್ತಿಲ್ಲ. ಇದರಿಂದ ಹತ್ತಾರು ಹಳ್ಳಿಗಳ ಸಾವಿರಾರು ರೈತರಿಗೆ ತೊಂದರೆ ಆಗುತ್ತಿರುವುದನ್ನು ಮನಗಂಡು ನಾನು ಆವತ್ತು ಶ್ರೀಗಳಿಗೆ ಅಕ್ರಮ ಪಂಪ್‌ಸೆಟ್‌ಗಳಿಂದಾಗಿ ನಮ್ಮ ಭಾಗಕ್ಕೆ ಭದ್ರಾ ನಾಲೆ ನೀರು ಬರುತ್ತಿಲ್ಲ. ನಮ್ಮ ತಾಲ್ಲೂಕಿನ ಕೆರೆಗಳಿಗೂ ನದಿ ನೀರು ಹರಿಸುವ ಯೋಜನೆ ಮತ್ತು ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೊಳಿಸಿ ಎಂದು ಶ್ರೀಗಳಿಗೆ ಮನವಿ ಮಾಡಿದ್ದೇನೆ.

ಅಕ್ರಮ ಪಂಪ್‌ಸೆಟ್‌ಗಳನ್ನು ತೆರವು ಮಾಡುವುದು ಸುಲಭದ ಮಾತಲ್ಲ. ಅವರಿಗೆ ರಾಜಕಾರಣಿಗಳ ಬೆಂಬಲದ ಜೊತೆಗೆ ಮಠಾಧೀಶರ ಬೆಂಬಲವೂ ಇದೆ. ಆದರೆ, ನಮಗೆ ಇದುವರೆಗೂ ಒಂದು ನೀರಾವರಿ ಯೋಜನೆ ಜಾರಿಗೊಳಿಸಲು ಸಹಕಾರ ಸಿಗುತ್ತಿಲ್ಲ ಎಂಬ ಬೇಸರದಿಂದ ಮನನೊಂದು ಆ ರೀತಿ ಹೇಳಿದ್ದೇನೆ. ನನ್ನ ಹೋರಾಟ ಯಾವತ್ತೂ ಹರಿಹರ ತಾಲ್ಲೂಕಿನ ರೈತರ ಪರವಾಗಿಯೇ ಇರುತ್ತದೆ. ಅದಕ್ಕಾಗಿ ನಾನು ಯಾವ ತ್ಯಾಗಕ್ಕೂ ಸಿದ್ದ ಎಂದು ಹರೀಶ್ ಭಾವನಾತ್ಮಕವಾಗಿ ಹೇಳಿದಾಗ ಸಭೆಯಲ್ಲಿ ಬೆಂಬಲ ವ್ಯಕ್ತವಾಯಿತು.

ಜಿ.ಪಂ. ಮಾಜಿ ಅಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ಈ ಸಭೆಯಲ್ಲಿ ಎಲ್ಲಾ ಪಕ್ಷದವರೂ ಸೇರಿದ್ದೇವೆ. ಎಲ್ಲರೂ ಸೇರಿ ತಾಲ್ಲೂಕಿನ ರೈತರ ಹಿತದೃಷ್ಟಿಯಿಂದ ಒಳ್ಳೆಯ ನಿರ್ಧಾರ ಕೈಗೊಳ್ಳೋಣ ಮತ್ತು ನಮ್ಮ ಹೋರಾಟಕ್ಕೆ ನಮ್ಮ ತಾಲ್ಲೂಕಿನ ಎಲ್ಲಾ ಮಠಾಧೀಶರ ಬೆಂಬಲ ಪಡೆದುಕೊಳ್ಳೋಣ ಎಂದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಅಕ್ರಮ ಪಂಪ್‌ಸೆಟ್‌ಗಳ ತೆರವು ವಿಚಾರದಲ್ಲಿ ಹೈಕೋರ್ಟ್ ಆದೇಶ ಪಾಲನೆಯಾಗಬೇಕು. ಇಂಜಿನಿಯರ್‌ಗಳು ಕಾಲುವೆಗಳಲ್ಲಿ ನೀರಿನ ನಿರ್ವಹಣ ಮಾಡಬೇಕು. ಇಲ್ಲಿ ಯಾವುದೇ ಪಕ್ಷ, ಸರ್ಕಾರದ ವಿಷಯ ಬೇಡ. ರೈತರ ವಿಷಯದಲ್ಲಿ ನಾವೆಲ್ಲರೂ ಒಂದಾಗಿ ಹೋರಾಟ ಮಾಡೋಣ. ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೆ ಹೊಸ ಡಿಪಿಆರ್‌ಗೆ ಟೆಂಡರ್ ಆಗಿದ್ದು, ದೇವರಬೆಳಕೆರೆ ಪಿಕಪ್ ಡ್ಯಾಂಗೂ ನೀರು ಹರಿಸುವ ಚಿಂತನೆ ಇದೆ ಎಂದು ಸಭೆಗೆ ತಿಳಿಸಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಕೊನೆ ಭಾಗಕ್ಕೆ ನೀರು ತಲುಪದಿರಲು ಅಕ್ರಮ ಪಂಪ್‌ಸೆಟ್‌ಗಳು ಒಂದು ಕಾರಣವಾದರೆ, ಭದ್ರಾ ಕಾಡಾ ಅಧ್ಯಕ್ಷರ, ಅಧಿಕಾರಿಗಳ ಇಚ್ಛಾಶಕ್ತಿ, ಕೊರತೆ ಕೂಡಾ ಇನ್ನೊಂದು ಪ್ರಮುಖ ಕಾರಣವಾಗಿದೆ. ಇದರಿಂದಾಗಿ ನೀರಿನ ನಿರ್ವಹಣೆ ವಿಫಲವಾಗಿದೆ. ಕಾಲುವೆಗಳ ರಿಪೇರಿ, ಹೂಳು ತೆಗೆಯಲೂ ಸರ್ಕಾರ ಅನುದಾನ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಭದ್ರಾ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪರೆಡ್ಡಿ ಮಾತನಾಡಿ, ಇಂಜಿನಿಯರ್‌ಗಳು ನಾಲೆಗಳ ಮೇಲೆ ಹಗಲು-ರಾತ್ರಿ ಸಂಚರಿಸಿ, ನೀರಿನ ನಿರ್ವಹಣೆ ಮಾಡಿಸಿದರೆ ಮಾತ್ರ ಕೆಳ ಭಾಗಕ್ಕೆ ನೀರು ಬರುತ್ತದೆ ಎಂದರು.

ರೈತ ಸಂಘದ ಹಾಳೂರು ನಾಗರಾಜ್ ಮಾತನಾಡಿ, R2 ನಲ್ಲಿ ನಮ್ಮ ಭಾಗಕ್ಕೆ ನೀರು ಕಡಿಮೆ ಬರುತ್ತದೆ. ಹಾಗಾಗಿ ಕೊನೆ ಭಾಗಕ್ಕೆ ನೀರು ಬರುತ್ತಿಲ್ಲ. ನೀವು ನೀರು ಹರಿಸಲು ಸಾಧ್ಯವಾಗದಿದ್ದರೆ, ಬೆಳೆ ಪರಿಹಾರ ಕೊಡಿಸಿ ಎಂದು ಇಂಜಿನಿಯರ್‌ಗಳನ್ನು ಒತ್ತಾಯಿಸಿದರು.

ಯಲವಟ್ಟಿ ಯೋಮಕೇಶ್ವರಪ್ಪ, ಲಕ್ಕಶೆಟ್ಟಿಹಳ್ಳಿ ಕಾಳಪ್ಪ, ಸಿರಿಗೆರೆ ಬೂದಾಳ್ ತಿಪ್ಪಣ್ಣ, ಎಂ.ಜಿ. ಪರಮೇಶ್ವರಗೌಡ, ಜಗಳಿಯ ಬಿಳಸನೂರು ಚಂದ್ರಪ್ಪ, ನಂದಿತಾವರೆಯ ಮಂಜಳಮ್ಮ, ಮುರುಗೇಂದ್ರಯ್ಯ ಮತ್ತಿತರರು ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿರಿಗೆರೆಯ ಎನ್.ಜಿ. ನಾಗನಗೌಡ್ರು ಮಾತನಾಡಿ, ಕೊನೆ ಭಾಗಕ್ಕೆ ರೈತರಿಗೆ ನೀರಿನ ವಿಷಯದಲ್ಲಿ ಶಾಶ್ವತ ಪರಿಹಾರ ನೀಡುವ ನಿಟ್ಟಿನಲ್ಲಿ ಈ ಸಭೆಯಲ್ಲಿ ಕೈಗೊಂಡಿರುವ 3 ನಿರ್ಣಯಗಳ ಜಾರಿಗೆ ಸರ್ಕಾರದ ಮೇಲೆ ಒತ್ತಡ ಹಾಕೋಣ ಎಂದರು.

ಶನಿವಾರ ಮಲೇಬೆನ್ನೂರಿನ ನೀರಾವರಿ ಕಚೇರಿ ಅಥವಾ ದಾವಣಗೆರೆ ಡಿಸಿ ಆಫೀಸ್‌ನಲ್ಲಿ ಭದ್ರಾ ಎಸ್‌ಇ ಅವರ ಸಮ್ಮುಖದಲ್ಲಿ ನೀರಿನ ನಿರ್ವಹಣೆ ಕುರಿತು ಡಿಸಿ ನಡೆಸುವುದಾಗಿ ಸಭೆಯ ಕೊನೆಯಲ್ಲಿ ಹರೀಶ್, ಶ್ರೀನಿವಾಸ್ ಮತ್ತು ದ್ಯಾವಪ್ಪರೆಡ್ಡಿ ತಿಳಿಸಿದರು.

ಸಿರಿಗೆರೆ ಗ್ರಾ.ಪಂ ಅಧ್ಯಕ್ಷ ಪ್ರಭು, ತಿಪ್ಪೇರುದ್ರಪ್ಪ, ಕೆ.ಜಿ.ಸದಾಶಿವಪ್ಪ, ರೈತ ಸಂಘದ ಪಾಲಾಕ್ಷಪ್ಪ, ಯಲವಟ್ಟಿಯ ಜಿ.ಆಂಜನೇಯ ಡಿ.ಹೆಚ್.ಚನ್ನಬಸಪ್ಪ, ಡಿ.ಹೆಚ್.ಮಹೇಂದ್ರಪ್ಪ, ಜಿಗಳಿಯ ನಾಗರಸನಹಳ್ಳಿ ಮಹೇಶ್ವರಪ್ಪ, ಜಿ.ಪಿ.ಹನುಮಗೌಡ, ಭಾನುವಳ್ಳಿಯ ಹೆಚ್.ಕೆ.ನಾರಾಯಣಪ್ಪ, ವಾಸನದ ವಸಂತಪ್ಪ, ಜೆ.ಪಿ. ಗೌಡ, ಪಾಳ್ಯದ ಗದಿಗೆಪ್ಪ, ಸಿರಿಗೆರೆಯ ಬಣಕಾರ್ ಉಮೇಶ್, ಶಿವಕುಮಾರ್, ಕುಂದೂರು ಮಂಜಪ್ಪ, ಕೆ.ರುದ್ರೇಶ್, ರಾಜು, ಕಮಲಾಪುರದ ಷಣ್ಮುಖಪ್ಪ ಸೇರಿದಂತೆ ನೂರಾರು ರೈತರು ಮತ್ತು ಎಇಇ ಕೃಷ್ಣಮೂರ್ತಿ ಸಭೆಯಲ್ಲಿದ್ದರು.


**AVAILABLE FOR RENT**

**1st Floor Building (2715 Sqft.)**

**N.R. Road, Davangere.**

*Contact Us :*

**M/S R. HANUMANTHAPPA & SON**

Hanumanthappa Buildings,

Poona-Bangalore Road, Davangere - 577 002.

**Ph : 258834, Mob : 94498 28834**


## BEFORE THE HON'BLE DISTRICT CONSUMER DISPUTES REDRESSAL COMMISSION AT DAVANGERE

**C.C. No. 01/2025**

**Complainant :** Mr. Manohar Joshi, Slo. Late Rama Joshi, Aged about: 65 years, Occ: Retired Person, # 8/2, 14th Cross, Near Nittuvalli Road, KTJ Nagar, Jayadeva Circle, Davangere District.

**-Vs- Opposite Parties :** Pur Energy Private Limited and Another

**SUMMONS TO THE OPPOSITE PARTY No.2**

**To, Shrivrushabha E Motors,** Opposite Party No.2, Behind jayashree Talkies, Church Road, Harihara, Davangere District. Additional Address: **Shrivrushabha E Motors,** Om Arcade, Beside Gundi Chaultry, M.C.C. B Block, Davangere - 577 004.


Whereas the complainant named above has instituted a complaint seeking direction to the opposite parties to pay the full payment of the vehicle mentioned in the complaint, along with the cost of expenses incurred on its purchase amounting to Rs. 87,000, and insurance costs of Rs. 3,183. The complainant also seeks return of the vehicle and other reliefs as mentioned in the prayer of the complaint. Hence, you are hereby summoned to appear in this Hon'ble Commission in person or by an advocate duly instructed on 26.03.2025 at 10.30. A.M. to answer the claim. Take notice that, in the event of your failure to appear on the aforementioned date, the complaint will be heard and determined. in your absence.

Given under my hand and the seal of the Commission on 27.02.2025.

Advocate for Complainant
**Vadiraja Bhat Y**
Advocate
Davangere
M : 96111 14199

**By order of the Commission**
**SD/- Asst. Registrar**
**Cum Asst. Administrative Officer**
**District Consumer Disputes**
**Redressal Commission Davangere**

### ಕುಂಬಳೂರು ಗ್ರಾಮದ ಸುವರ್ಣಮ್ಮ ನಿಧನ



ಹರಿಹರ ತಾಲ್ಲೂಕು ಕುಂಬಳೂರು ಗ್ರಾಮದ ಬಸೇಟಪ್ಪ ಹನುಮಂತಪ್ಪನವರ ಧರ್ಮಪತ್ನಿ ಶ್ರೀಮತಿ ಸುವರ್ಣಮ್ಮ (80 ವರ್ಷ) ಇವರು ದಿನಾಂಕ 27.02.2025ರ ಗುರುವಾರ ಸಂಜೆ 4.15ಕ್ಕೆ ನಿಧನರಾದರು. ಪತಿ, ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.02.2025ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಕುಂಬಳೂರಿನಲ್ಲಿ ನೆರವೇರಲಿದೆ.

### ಶಿವಲೀಲಾ ಬಾಗಲಕೋಟೆ ನಿಧನ



ದಾವಣಗೆರೆ ಬಸವರಾಜಪೇಟೆ ವಾಸಿ ಮಲ್ಲೇಶಪ್ಪ ಇವರ ಧರ್ಮಪತ್ನಿ ಬಿ.ಎಂ. ಶಿವಲೀಲಾ ಬಾಗಲಕೋಟೆ (67 ವರ್ಷ) ಇವರು ದಿನಾಂಕ 27.02.2025ರ ಗುರುವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.02.2025ರ ಶುಕ್ರವಾರ ಮಧ್ಯಾಹ್ನ 11.30ಕ್ಕೆ ಗಾಂಧಿನಗರದ ವಿರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ನಗರದಲ್ಲಿ ನಾಳೆ ನೃತ್ಯ ಸಮರ್ಪಣೆ

ದಾವಣಗೆರೆ, ಫೆ.27- ನಗರದ ಶ್ರೀ ಶಾರದ ಸಂಗೀತ ಮತ್ತು ನೃತ್ಯ ಕಲಾ ಶಾಲೆ ವತಿಯಿಂದ ನೃತ್ಯ ಕ್ಷೇತ್ರದ ಮಹಾನ್ ಚೇತನ ಕೀರ್ತಿಶೇಷರಾದ ರುಕ್ಮಿಣಿ ದೇವಿ ಅರುಂಡೇಲ್ ಅವರ ಸ್ಮರಣಾರ್ಥ ನೃತ್ಯ ಸಮರ್ಪಣಾ - 2025 (ಭರತ ನಾಟ್ಯ ಕಾರ್ಯಕ್ರಮ) ವು ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆವರಣದಲ್ಲಿ ನಾಡಿದ್ದು ದಿನಾಂಕ 1ರ ಭಾನುವಾರ ಸಂಜೆ 5 ಗಂಟೆಗೆ ನಡೆಯಲಿದೆ.

ಶ್ರೀ ಶಾರದ ಸಂಗೀತ ಮತ್ತು ನೃತ್ಯ ಕಲಾ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ ಸಮರ್ಪಣಾ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

ಭರತ ನಾಟ್ಯ ವಿದ್ವತ್ ಅಂತಿಮ ವಿಭಾಗದಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾಗಿರುವ ಕು. ಬಿ. ಜ್ಯೋತಿ, ಭರತ ನಾಟ್ಯ ವಿದ್ವತ್ ಪೂರ್ವ ವಿಭಾಗದದಲ್ಲಿ ಉನ್ನತ ವಿಭಾಗದಲ್ಲಿ ತೇರ್ಗಡೆಯಾದ ಕು. ಟಿ. ತನುಶ್ರೀ, ಭರತ ನಾಟ್ಯ ಸೀನಿಯರ್ ವಿಭಾಗದಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾಗಿರುವ ಕು. ಧನ್ಯ ನಾಗೇಶ್, ಭರತ ನಾಟ್ಯ ಜ್ಯೂನಿಯರ್ ವಿಭಾಗದಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆಯಾದ ಕು. ವಿ.ಎಸ್. ಚೈತನ್ಯ ಅವರುಗಳನ್ನು ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಗುವುದು.

## ಶಿವರಾತ್ರಿ : ನಗರದ ಶ್ರೀ ಕೇದಾರನಾಥ ದೇವಾಲಯದಲ್ಲಿ ವಿಶೇಷ ಪೂಜೆ



ದಾವಣಗೆರೆ, ಫೆ. 27 - ನಗರದ ಹೊಂಡದ ಸರ್ಕಲ್, ತುಳಸಿ ಪಾರ್ಕ್ ಬಳಿಯ ಶ್ರೀ ಕೇದಾರನಾಥ ದೇವಾಲಯದಲ್ಲಿ ಶಿವರಾತ್ರಿ ಪ್ರಯುಕ್ತ ಶ್ರೀ ಗಣಪತಿ ಹೋಮ, ನವಗ್ರಹ ಪೂಜೆ, ನಂತರ ಶ್ರೀ ಸ್ವಾಮಿಗೆ ರುದ್ರಾಭಿಷೇಕ ನಡೆಯಿತು.

ಇದೇ ಸಂದರ್ಭದಲ್ಲಿ ಉಕೀ ಮಠದ ಶ್ರೀ ಓಂಕಾರೇಶ್ವರ ದೇವಾಲಯದ ಆವರಣದಲ್ಲಿ ಕೇದಾರ ಪೀಠದ ಜಗದ್ಗುರು ಶ್ರೀ ಭೀಮಾಶಂಕರ ಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬರುವ ಮಾರ್ಚ್ 2ರ ಶುಕ್ರವಾರ ಬೆಳಿಗ್ಗೆ 7 ಘಂಟೆಗೆ ಹಿಮಾಲಯದ ಶ್ರೀ ಕೇದಾರನಾಥ ದೇವಾಲಯದ ಬಾಗಿಲು ತೆರೆಯಲಾಗುವುದು ಎಂದು ಪಂಚಾಂಗ ಶ್ರವಣದ ಮೂಲಕ ತಿಳಿಸಲಾಯಿತು ಎಂದು ಇಂದೂಧರ್ ನಿಶಾನಿಮಠ್ ತಿಳಿಸಿದ್ದಾರೆ.

# ಬಂಬೂ ಬಜಾರ್‌ನಲ್ಲಿ ವಿಜೃಂಭಣೆಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ




ದಾವಣಗೆರೆ, ಫೆ.27 - ನಗರದ ಬಂಬೂ ಬಜಾರ್‌ನಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವವು ಗುರುವಾರ ಸಂಜೆ ವಿಜೃಂಭಣೆಯಿಂದ ನೆರವೇರಿತು. ಶಿವಶರಣ ಶ್ರೀ ಇಮ್ಮಡಿ ಬಸವ ಮೇದಾರ ಕೇತೇಶ್ವರ ಸ್ವಾಮೀಜಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖದಲ್ಲಿ ನಡೆದ ರಥೋತ್ಸವದ ನಂತರ ಅನ್ನ ಸಂತರ್ಪಣೆ ನಡೆಯಿತು. ಇದಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನಕ್ಕೆ ಆಗಮಿಸಿ, ವಿಶೇಷ ಪೂಜೆ ಸಲ್ಲಿಸಿದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಮಠದಲ್ಲಿಂದು ಶಿವರಾತ್ರಿ ಅಮಾವಾಸ್ಯೆ



ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಮಹಾಶಿವರಾತ್ರಿ ಪ್ರಯುಕ್ತ ನಾಡಿದ್ದು ಇಂದು ಬೆಳಿಗ್ಗೆ 6.30ಕ್ಕೆ ಅಭಿಷೇಕ - ಪೂಜೆ ನಡೆಯಲಿದೆ.

ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಪಾದಯಾತ್ರೆ ಟ್ರಸ್ಟ್ ಇವರು ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಶಿವರಾತ್ರಿ ಅಮಾವಾಸ್ಯೆ ಪೂಜೆ



ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಇಂದು ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಉಮಾದೇವಿ ಮತ್ತು ಎ.ಡಿ. ಮಂಜಪ್ಪ ಹಾಗೂ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಹಂಪಿ ಉತ್ಸವಕ್ಕೆ ನಗರದ ಹಿಂದೂಸ್ತಾನಿ ಗಾಯಕಿ ಡಾ. ಪೃಥ್ವಿ ಐಗೂರು ಆಯ್ಕೆ



ದಾವಣಗೆರೆ, ಫೆ. 27 - ಬರುವ ಮಾರ್ಚ್ 1 ಮತ್ತು 2 ರಂದು ನಡೆಯಲಿರುವ 2025 ನೇ ಸಾಲಿನ ಹಂಪಿ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಗರದ ಹಿಂದೂಸ್ತಾನಿ ಗಾಯಕಿ ಕು. ಡಾ. ಪೃಥ್ವಿ ಎ.ಟಿ. ಐಗೂರು ಆಯ್ಕೆಯಾಗಿದ್ದಾರೆ.

ಮಾರ್ಚ್ 2ರ ಭಾನುವಾರ ಸಂಜೆ ಹಂಪಿಯ ಎದುರು ಬಸವಣ್ಣ ವೇದಿಕೆಯಲ್ಲಿ ನಡೆಯಲಿರುವ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಡಾ. ಪೃಥ್ವಿ ಅವರು ತಮ್ಮ ಗಾಯನ ಪ್ರಸ್ತುತ ಪಡಿಸುವರು. ಸಂಗೀತ ಗುರು ಭೀಮಸೇನ ಜೋಶಿಯವರಿಂದ ಸಂಗೀತಾಭ್ಯಾಸ ಮಾಡಿರುವ ಡಾ. ಪೃಥ್ವಿ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ವಿಭಾಗದಲ್ಲಿ ಸೀನಿಯರ್ ಪರೀಕ್ಷೆ ಉತ್ತೀರ್ಣರಾಗಿದ್ದಾರೆ. ಪೃಥ್ವಿ, ನಗರದ ಬಾಪೂಜಿ ಆಸ್ಪತ್ರೆಯ ಲ್ಯಾಬ್ ಟೆಕ್ನೀಷಿಯನ್ ಎ.ಎನ್.ತಿಪ್ಪೇಸ್ವಾಮಿ ಐಗೂರು ಹಾಗೂ ಸಾಹಿತಿ ಗೀತಾ ತಿಪ್ಪೇಸ್ವಾಮಿ ಐಗೂರು ದಂಪತಿ ಪುತ್ರಿ.

## ಹರಿಯಾಣದ ರಾಷ್ಟ್ರಮಟ್ಟದ ಫಾಸ್ಟ್ 5 ನೆಟ್ ಬಾಲ್ ತಂಡಕ್ಕೆ ನಗರದ ಇಬ್ಬರು ಆಟಗಾರರು ಆಯ್ಕೆ



ದಾವಣಗೆರೆ, ಫೆ. 27 - ಹರಿಯಾಣದ ನೆಟ್ ಬಾಲ್ ಅಸೋಸಿಯೇಷನ್ ಭಿವಾನಿಯ ಕಲ್ಲಿಂಗದಲ್ಲಿರುವ ಶ್ರೀ ಬಾಲಾಜಿ ಸೀನಿಯರ್ ಸೆಕೆಂಡರಿ ಶಾಲೆಯಲ್ಲಿ ಇಂದು ಮತ್ತು ನಾಳೆ ನಡೆಯಲಿರುವ 3ನೇ ಫಾಸ್ಟ್ 5 ಜ್ಯೂನಿಯರ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಶಿಪ್ (ಬಾಲಕರು ಮತ್ತು ಬಾಲಕಿಯರು) ಗೆ ದಾವಣಗೆರೆ ಜಿಲ್ಲಾ ನೆಟ್ ಬಾಲ್ ಸಂಸ್ಥೆಯಿಂದ ಬಾಲಕಿಯರ ತಂಡಕ್ಕೆ ಇಬ್ಬರು ಆಯ್ಕೆಯಾಗಿದ್ದಾರೆ. ಎ.ಪಿ. ಲಕ್ಷ್ಮಿ ಹಾಗೂ ಕೆ.ಪಿ. ಸಾನ್ವಿ ಆಯ್ಕೆಯಾಗಿದ್ದಾರೆ. ಲಕ್ಷ್ಮಿ, ಕೆ. ಪ್ರಕಾಶ್ ಮತ್ತು ಟಿ. ನೇತ್ರಾವತಿ ದಂಪತಿ ಪುತ್ರಿ ಹಾಗೂ ಸಾನ್ವಿ, ಕೆ. ಹೆಚ್. ಪ್ರಶಾಂತ್ ಮತ್ತು ಕೆ.ಎನ್. ರೇಖಾ ದಂಪತಿ ಪುತ್ರಿ. ಇಬ್ಬರಿಗೂ ಜಿಲ್ಲಾ ನೆಟ್ ಬಾಲ್ ಸಂಸ್ಥೆಯ ಕಾರ್ಯದರ್ಶಿ ಆರ್. ವೀರೇಶ್, ತರಬೇತುದಾರರು ಆರ್. ದರ್ಶನ್ ಶುಭ ಕೋರಿದ್ದಾರೆ.

## ಶ್ರೀ ದಾನಮ್ಮ ದೇವಸ್ಥಾನದಲ್ಲಿ ಇಂದು ಶಿವರಾತ್ರಿ ಅಮಾವಾಸ್ಯೆ ಪೂಜೆ

ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಹೂವಿನ ಅಲಂ ಕಾರ ನಡೆಯುವುದು. ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ.



ಬೇತೂರು ಬಸವರಾಜಪ್ಪ ಮತ್ತು ಮಕ್ಕಳು, ಬೇತೂರು ಮುರುಗೇಶಪ್ಪ ಮತ್ತು ಮಕ್ಕಳು, ಶ್ರೀಮತಿ ಸೌಭಾಗ್ಯ ಜಿ.ಎಂ. ಮೋಹನ್ ಮತ್ತು ಮಕ್ಕಳು ಹಾಗೂ ಶ್ರೀಮತಿ ವೀಣಾ ಎಸ್. ಕೆ. ರವಿ ಮತ್ತು ಮಕ್ಕಳು ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ಎಲೆಬೇತೂರಿನಲ್ಲಿ ವಿಶೇಷ ಪೂಜೆ



ದಾವಣಗೆರೆ, ಫೆ. 27 - ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ಈಶ್ವರ ಸ್ವಾಮಿಗೆ ವಿಶೇಷವಾಗಿ ಭಸ್ಮ ಅರ್ಪಣೆ, ಪಂಚಾಮೃತ ಅಭಿಷೇಕ, ಪುಷ್ಪಾರ್ಚನೆ, ಬಿಲ್ವಾರ್ಚನೆ ಮಹಾಮಂಗಳಾರತಿ ನಂತರ ಬಂದ ಭಕ್ತಾದಿಗಳಿಂದ ಓಂ ನಮ ಶಿವಾಯ, ಶಿವ ಸ್ಮರಣೆ ಹಾಗೂ ಪ್ರಸಾದ ವಿನಿಯೋಗ ನಡೆಯಿತು.

## ನಗರದಲ್ಲಿ ಇಂದು ಶಿವಾನುಭವ ಸಂಪದ

ಹಾಲಕೆರೆ ಶ್ರೀ ಅನ್ನದಾನೇಶ್ವರ ಸಾರ್ವಜನಿಕ ಸೇವಾ ಟ್ರಸ್ಟ್ ಇವರ ವತಿಯಿಂದ ಇಂದು ಸಂಜೆ 6.30 ಕ್ಕೆ ಶ್ರೀ ಅನ್ನದಾನೇಶ್ವರ ಶಾಖಾ ಮಠದಲ್ಲಿ 278 ನೇ ಶಿವಾನುಭವ ಸಂಪದ ಕಾರ್ಯಕ್ರಮ ನಡೆಯಲಿದೆ.

ಶ್ರೀ ಮುಪ್ಪಿನ ಬಸವಲಿಂಗ ಸ್ವಾಮೀಜಿ, ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅನ್ನದಾನೀಶ್ವರ ಸಾರ್ವಜನಿಕ ಸೇವಾ ಟ್ರಸ್ಟ್ ಅಧ್ಯಕ್ಷ ಡಾ. ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಭಾರತ ಸೇವಾದಳ ಜಿಲ್ಲಾ ಸಂಘಟಕ ಫಕ್ಕೀರಗೌಡ ಹಳೆಮನಿ ಉಪನ್ಯಾಸ ನೀಡಲಿದ್ದಾರೆ.


**ಮಳಿಗೆ ಬಾಡಿಗೆಗೆ ಇದೆ**

ದಾವಣಗೆರೆಯ ವಾಣಿಜ್ಯ ಕೇಂದ್ರವಾಗಿರುವ ಮಂಡಿಪೇಟೆಯಲ್ಲಿ 18x50 ಅಳತೆಯ ಮಳಿಗೆ ಬಾಡಿಗೆಗೆ ಇದೆ.
ಬೆಳ್ಳಿ-ಬಂಗಾರದ ಅಂಗಡಿ ಅಥವಾ ಶೋ ರೂಂ ಮಾಡಲು ಯೋಗ್ಯವಾಗಿದೆ.

ಸಂಪರ್ಕಿಸಿ. 94487 27084






**ಶ್ರೀಮತಿ ಕೆಂಗಾಪುರ ಶಾಂತಿಬಾಯಿ ನಿಧನ**



ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು, ಕೆಂಗಾಪುರ ಗ್ರಾಮದ ವಾಸಿ
ದಿ॥ ಸಕ್ರ್ಯನಾಯ್ಕ ಇವರ ಧರ್ಮಪತ್ನಿ
**ಶ್ರೀಮತಿ ಶಾಂತಿಬಾಯಿ**
(86 ವರ್ಷ) ಇವರು ದಿನಾಂಕ : 27.02.2025ರ ಗುರುವಾರ ಬೆಳಿಗ್ಗೆ 8.50ಕ್ಕೆ ನಿಧನರಾಗಿದ್ದಾರೆ. ಇಬ್ಬರು ಗಂಡು ಮಕ್ಕಳು, ಐವರು ಹೆಣ್ಣು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 28.02.2025ರ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಕೆಂಗಾಪುರ ಗ್ರಾಮ, ಚನ್ನಗಿರಿ ತಾಲ್ಲೂಕಿನ ಇವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ - ಮಗ : ಎಸ್. ರಾಜಾನಾಯ್ಕ್
ಭೂ ದಾಖಲೆಗಳ ಜಂಟಿ ನಿರ್ದೇಶಕರು (ನಿ.)
ತರಳಬಾಳು ಬಡಾವಣೆ, ದಾವಣಗೆರೆ. ಫೋ. : 9481386633



ಶ್ರೀ ಗುರು ಮರುಳಸಿದ್ಧೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ, www.hindusmatrimony.com
SGM Tours **ಎಸ್‌ಜಿಎಂ ಟೂರ್ಸ್**
ಬಾಪೂಜಿ ಮಕ್ಕಳ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
**ವಿಮಾನ ಮತ್ತು ಬಸ್ಸಿನಲ್ಲಿ**
14 ದಿನಗಳು **ಚಾರ್ ಧಾಮ್ ವಿಶೇಷ ಯಾತ್ರೆ** ಜೂನ್ 2025 ರಿಂದ
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ)*
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ಜೂನ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಈ ಮೂರು ತಿಂಗಳಲ್ಲಿ ಕೇದಾರನಾಥ್‌ಗೆ ಹೆಲಿಕ್ಯಾಪ್ಟರ್ ಬುಕ್ಕಿಂಗ್ ಮಾಡುವವರು ಒಂದೇ ದಿನ ಬುಕ್ಕಿಂಗ್ ಓಪನ್ ಆಗುವುದರಿಂದ ಮಾರ್ಚ್ 15ರ ಒಳಗೆ ಪ್ರವಾಸ ಬುಕ್ಕಿಂಗ್ ಮಾಡಿಕೊಳ್ಳಲು ವಿನಂತಿ.
**ಅಮರ್‌ನಾಥ, ವೈಷ್ಣೋದೇವಿ ವಿಶೇಷ ಪ್ರವಾಸ** 3 ಜುಲೈ 2025 ರಿಂದ 9 ದಿನಗಳು
ಸಂದರ್ಶಿಸುವ ಸ್ಥಳಗಳು : ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್
ಸಂಚಾಲಕರು : ವೇ॥ ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ



**ಹುಟ್ಟುಹಬ್ಬದ ಶುಭಾಶಯಗಳು**



ನೀರಾವರಿ ಇಲಾಖೆಯ ನಿವೃತ್ತ ಅಭಿಯಂತರರೂ,
ದಾವಣಗೆರೆ ಎಂಸಿಸಿ 'ಎ' ಬ್ಲಾಕ್ ಶ್ರೀ ಶಿರಡಿ ಸಾಯಿ ಮಂದಿರದ
ಕಾರ್ಯದರ್ಶಿಗಳೂ, ಶ್ರೀ ಶಿರಡಿ ಸಾಯಿ ಮಂದಿರದ
ಯೋಗ ಕೇಂದ್ರದ ಸಂಚಾಲಕರು, ದಾವಣಗೆರೆ ಜಿಲ್ಲಾ ಯೋಗ
ಒಕ್ಕೂಟದ ಗೌರವಾಧ್ಯಕ್ಷರೂ, ಕರುಣಾ ಜೀವ ಕಲ್ಯಾಣ ಟ್ರಸ್ಟ್
ಖಜಾಂಚಿಗಳೂ, ಧಾರ್ಮಿಕ ಚಿಂತಕರೂ ಆದ
**ಶ್ರೀ ಎಂ. ಶಿವಪ್ಪ**
ಅವರಿಗೆ 88ನೇ ವರ್ಷದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ಶ್ರೀ ಶಿರಡಿ ಸಾಯಿಬಾಬಾರವರು ಆಯುಷ್ಯ, ಆರೋಗ್ಯ ನೆಮ್ಮದಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಶ್ರೀ ಸಾಯಿ ಭಕ್ತಾದಿಗಳು



**ಪ್ರಥಮ ವರ್ಷದ ಪುಣ್ಯಸ್ಮರಣೆ**



**ಸಾವಳಗಿ ಯಲ್ಲಮ್ಮ**
ನಿಧನ : 28.02.2024
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನಿಮ್ಮ ಮಾರ್ಗದರ್ಶದನಲ್ಲಿ ಮುನ್ನಡೆಯುತ್ತಿರುವ
ಸದಾ ನಿಮ್ಮ ಸ್ಮರಣೆಯಲ್ಲಿರುವ...
♦ ನಾಗರಾಜ್ ♦ ರುಕ್ಮಿಣಿ ♦ ಪ್ರಭುದೇವ್ ♦ ಲೀಲಾವತಿ
♦ ವಿಜಯಲಕ್ಷ್ಮಿ ♦ ವೈಷ್ಣವಿ ♦ ನಿಶಾಂತ್
**ಸಾವಳಗಿ ಕುಟುಂಬದವರು**






## ದಾವಣಗೆರೆ ಹಳೆ ಊರಿನ ಶಿವರಾತ್ರಿ ಸ್ವಾರಸ್ಯಗಳು...

# ಹೆಂಡ್ತಿ ಕೆಂಪಗಿರಲಿ ? !!

ಸುಮಾರು 56 ವರ್ಷಗಳ ಹಿಂದೆ ಒಂದು ಶಿವರಾತ್ರಿ ದಿನ 'ಚಂದ್ರಕಾಂತಾ ಕಲ್ಲಂಗಡಿ ಹಣ್ಣು ಕೊಡಿಸು ಬಾರಪ್ಪಾ, ಹೆಂಡ್ತಿ ಕೆಂಪಗೆ ಇರಬೇಕು' ಎಂದು ಮೂಲಿಮನಿ ವಿರೂಪಣ್ಣ ಅಕ್ಕಸಾಲಿ ಚಂದ್ರಕಾಂತನಿಗೆ ಹೇಳಿದರು. ಕೇಳಿ ನನಗೆ ನಗು ಬಂದಿತು, ಆದರೆ ನನ್ನ ಪಕ್ಕದಲ್ಲಿದ್ದ ಗೌಡರ ಪ್ರಕಾಶಗೆ ಅರ್ಥವಾಗಲಿಲ್ಲ, ಏನೆಂದು ನನ್ನನ್ನು ಕೇಳಿದ, ನಾನು ಅವನಿಗೆ ಬಿಡಿಸಿ ಹೇಳಿದೆ, ಅವನೂ ನಕ್ಕ. ಅದೇನೆಂಬುದನ್ನು ಈ ಲೇಖನದ ಕೊನೆಯಲ್ಲಿ ಹೇಳುವೆ, ಅದಕ್ಕೂ ಮೊದಲು ಆ ಕಾಲದ ಶಿವರಾತ್ರಿ ಫಲಾಹಾರದ ಬಗ್ಗೆ ತುಸು ಹೇಳುವೆ.

ಈಗಂತೂ ಶಿವರಾತ್ರಿ ಫಲಾಹಾರ ವೆಂದರೆ ಕಲ್ಲಂಗಡಿ ಹಣ್ಣು ಬೇಕೇ ಬೇಕು ಎಂಬಷ್ಟು ಕಡ್ಡಾಯ ಗೊಳಿಸಿ ಕೊಳ್ಳಲಾಗಿದೆ. ಹಿಂದೆಲ್ಲಾ ಉಪವಾಸ ಇರಲಾರದವರು ಅನ್ನದ ಬದಲು ಅವಲಕ್ಕಿ, ಉಪ್ಪಿಟ್ಟನ್ನೋ, ರೊಟ್ಟಿ ಮುದ್ದೆಯ ಬದಲು ಮಂಡಕ್ಕಿ ಉಸುಳಿಯನ್ನೊ ಮತ್ತೆ ಕೆಲವರು ಹಣ್ಣು ಹಾಲನ್ನೊ ಸೇವಿಸಿದರೆ ಇನ್ನೂ ಕೆಲವರು ತಂಬಾಕು ಪೇಟೆಯ ಹೊಟ್ಟೆ ನಂಜಪ್ಪನ ಅಂಗಡಿಗೆ ಹೋಗಿ 'ಬಿಲ್ಲಿ ಫರಾಳ' ಅರ್ಥಾತ್ 'ಫಲಾಹಾರ' ಅಂದರೆ ಒಂದು ಬಿಲ್ಲೆಗೆ ಒಂದಷ್ಟು ಮಂಡಕ್ಕಿ ಖಾರ ಜೊತೆಗೆ ಸಿಹಿ ಬೂಂದಿ ಸಹಿತಾಗಿ ಅಂಗಡಿಯಲ್ಲಿರುವ ಎಲ್ಲ ತಿನಿಸುಗಳನ್ನೂ ಸ್ವಲ್ಪ ಸ್ವಲ್ಪ ಸೇರಿಸಿ ಕಲಸಿ ಪೊಟ್ಟಣದಲ್ಲಿ ಕೊಡಲಾಗುತ್ತಿತ್ತು, ಅದನ್ನೇ 'ಶಿವ ಶಿವ' ಎಂದು ಅಲ್ಲೇ ಕುಳಿತು ತಿನ್ನುತ್ತಿದ್ದರು.

ಆಗ ಈಗಿನಂತೆ ವರ್ಷದ ಬಹುತೇಕ ತಿಂಗಳುಗಳಲ್ಲಿ ಕಲ್ಲಂಗಡಿ ಹಣ್ಣು ಸಿಗುತ್ತಿರಲಿಲ್ಲ. ಶಿವರಾತ್ರಿಯ ಆಸು ಪಾಸಿನಲ್ಲಿ ಬರುತ್ತಿತ್ತಾದರೂ ಈಗಿನಂತೆ ಸುಧಾರಿತ ತಳಿಯ ಹಣ್ಣುಗಳಾಗಿರಲಿಲ್ಲ. ಸಮೀಪದ ಹೊಳೆ, ಹಳ್ಳಗಳ ತಟದಲ್ಲಿ ಬೆಳೆದ ಕಲ್ಲಂಗಡಿಯ ಗಾತ್ರ ದೊಡ್ಡದಾಗಿರುತ್ತಿತ್ತು, ಕಡು ಕಪ್ಪಿನಂತೆ ಕಾಣುವ ದಟ್ಟ ಹಸಿರು ಬಣ್ಣ, ಆಕಾರ ಗುಂಡಾಗಿರದೇ ಒಂದು ರೀತಿ ದೊಡ್ಡ ಬೂದುಗುಂಬಳಕಾಯಿಯ ತರ ಇರುತ್ತಿದ್ದು, ಹೆಚ್ಚಿ ನೋಡಿದರೆ ಒಳಗೆ ಬಿಳಿಯ ಭಾಗ ಅಧಿಕವಾಗಿರುತ್ತಿತ್ತೇ ಹೊರತು, ಕೆಂಪು ಭಾಗ ತುಂಬಾ ಕಡಿಮೆ ಇರುತ್ತಿತ್ತು, ಅಲ್ಲದೆ ಈಗಿನಂತೆ ಕಡುಕೆಂಪು ಸಹ ಇರದೇ ತಿಳಿ ಗುಲಾಬಿ ಬಣ್ಣವು ಆಗಿರುತ್ತಿದ್ದು ಗಟ್ಟಿಯಾದ ಕರಿ ಬೀಜಗಳೆ ಹೆಚ್ಚಾಗಿರುತ್ತಿದ್ದವು. ಕಲ್ಲಂಗಡಿ ಹಾಗೂ ಬನಸ್ಪತ್ರೆ, ಕರಬೂಜಾ ಹಣ್ಣುಗಳನ್ನು ಕಾಯಿ ಪೇಟೆಯ ನಾರಾಯಣ ಬಲ್ಲಾಳ ಡಾಕ್ಟರ್ ಆಸ್ಪತ್ರೆಯ ಮುಂಭಾಗದಿಂದ ಭೋಗಯ್ಯ ಶೆಟ್ಟರ ಅಂಗಡಿ, ರಿಕಬ್ ಚಂದ್ ಮನೆ, ಎಮ್ಮಿಯವರ ಬಂಗಾರದ ಅಂಗಡಿ, ಬಾಬುಲಾಲ್ ಮನೆ ಮುಂದಿನ ರಸ್ತೆ ಬದಿಯಲ್ಲಿ, ಇತ್ತ ಕಡೆ ಸಿಟಿ ಆನಂದ ಭವನ ಹೋಟೆಲ್ ಪಕ್ಕದ ನೀರಿನ ತೊಟ್ಟಿಯ ಪಕ್ಕದಿಂದ ಬಾಂಬೆ ಬಜಾರ್, ಯಜಮಾನ್ ಮೋತಿ ದೊಡ್ಡಪ್ಪನವರ ಮನೆಯ ಮುಂಭಾಗದವರೆಗೂ ಮುಖ್ಯವಾಗಿ ಮಾರಲಾಗುತ್ತಿತ್ತು. ಅದೇ ರೀತಿ ತರಕಾರಿ ಮಾರುಕಟ್ಟೆ ಮುಂದಿನ ರಸ್ತೆ ಹಾಗೂ ಬೆಳ್ಳುಳ್ಳಿ ಗಲ್ಲಿಯ ಪೂರ್ವ ಭಾಗ ರಸ್ತೆಯಲ್ಲೂ ಸ್ವಲ್ಪಮಟ್ಟಿಗೆ ಮಾರಲಾಗುತ್ತಿತ್ತು. ಕಲ್ಲಂಗಡಿ ಹಣ್ಣು ಕೊಳ್ಳಬೇಕೆಂದರೆ ಅದರ ಪರೀಕ್ಷೆಯೂ ತಿಳಿದಿರಬೇಕಿತ್ತು. ಅಕ್ಕಸಾಲಿ ಚಂದ್ರಕಾಂತರಿಗೆ ಈ ವಿದ್ಯೆ ಒಲಿದಿತ್ತು, ಹೀಗಾಗಿ ಅನೇಕರು ಶಿವರಾತ್ರಿಗಾಗಿ ಕಲ್ಲಂಗಡಿ ಹಣ್ಣುಕೊಳ್ಳುವಾಗ ಚಂದ್ರಕಾಂತನನ್ನು ಕರೆದುಕೊಂಡು ಹೋಗುತ್ತಿದ್ದರು. ಈಚಿನ ವರ್ಷಗಳಲ್ಲಿ ನಾನು ನೋಡಿದಂತೆ ಶಾಮನೂರು ಶಿವಶಂಕರಪ್ಪನವರ ಕಲ್ಲಪ್ಪ ಅಂಡ್ ಸನ್ಸ್ ಅಂಗಡಿಯಲ್ಲಿ ಕೆಲಸ ಮಾಡುವ ಶಾಂತಪ್ಪಗೆ ಒಳ್ಳೆಯ ಕಲ್ಲಂಗಡಿ ಹಣ್ಣನ್ನು ಆರಿಸುವ ವಿಧಾನ ಗೊತ್ತಿತ್ತು.

ಹೀಗಾಗಿಯೇ ಶಾಮನೂರು ಬಸವರಾಜಪ್ಪನವರಾಗಲೀ ಮೆನೇಜರ್ ರುದ್ರಪ್ಪನವರಾಗಲೀ ಎಸ್.ಪಿ. ಸಂಗಪ್ಪನವರಾಗಲೀ ಶಿವರುದ್ರಯ್ಯನವರಾಗಲೀ ಕಲ್ಲಂಗಡಿ ಹಣ್ಣು ಆರಿಸಿ ತರಲು ಶಾಂತಪ್ಪನನ್ನೇ ಕಳಿಸುತ್ತಿದ್ದರು. ಕಲ್ಲಂಗಡಿ ಹಣ್ಣು ಮಾರುವವರ ಕೈಯಲ್ಲಿ ಉದ್ದನಾದ ಒಂದು ಚಾಕು ಇರುತ್ತಿತ್ತು. ಹಣ್ಣಿನ ಒಂದು ಭಾಗಕ್ಕೆ ಚಾಕುವಿನಿಂದ ಮೂರು ಅಥವಾ ನಾಲ್ಕು ಮಗ್ಗಲುಗಳಲ್ಲಿ ಚುಚ್ಚಿ ಒಂದು ತುಂಡನ್ನು ಹೊರತೆಗೆದು ತೋರಿಸುತ್ತಿದ್ದರು. ಇದನ್ನು 'ಚಂದ್ರಿಕೆ ಹಾಕುವುದು' ಎಂದು ಹೇಳಲಾಗುತ್ತಿತ್ತು. ಚಂದ್ರಿಕೆ ತೆಗೆದಾಗ ಹಣ್ಣು ಕೆಂಪಾಗಿದ್ದರೆ ಮಾತ್ರ ಕೊಳ್ಳುತ್ತಿದ್ದರು. ಈ ವಿಷಯದಲ್ಲಿ ಆಗಾಗ ಕೊಳ್ಳುವವರು ಮಾರುವವರ ನಡುವೆ ಜಗಳವೂ ನಡೆಯುತ್ತಿದ್ದು, ಮಾರುವವರಿಗೆ ಹಣ್ಣಿನ ಯಾವ ಭಾಗ ಹೆಚ್ಚು ಕೆಂಪು ಇರುತ್ತದೆ ಎಂಬುದು ಗೊತ್ತಿರುತ್ತಿತ್ತು, ಆ ಭಾಗಕ್ಕೇ ಚಂದ್ರಿಕೆ ಹಾಕಿ ತೋರಿಸುತ್ತಿದ್ದರು. ಹಣ್ಣನ್ನು ಕೈಗೆತ್ತಿಕೊಂಡು ಅದರ ತೂಕ ಹಾಗೂ ಕೈಯಿಂದ ಬಡಿದಾಗ ಬರುವ ಶಬ್ದದಿಂದಲೇ ಅಕ್ಕಸಾಲಿ ಚಂದ್ರಕಾಂತಗೆ ಹಣ್ಣಿನ ಒಳ ಮರ್ಮ ಗೊತ್ತಾಗುವ ಕಲೆ ಸಿದ್ಧಿಸಿತ್ತು. ಅದಕ್ಕೇ ಆತನನ್ನು ಎಲ್ಲರೂ ನಿರೀಕ್ಷಿಸುತ್ತಿದ್ದರು. ಚಂದ್ರಕಾಂತ ಆರಿಸಿದ ಹಣ್ಣು ಚಂದ್ರಿಕೆ ಹಾಕಿ ನೋಡಿದಾಗ ಒಳಭಾಗ ಕೆಂಪು ಇರುತ್ತಿತ್ತು. 'ಚಂದ್ರಕಾಂತ' ಹಾಗೂ 'ಚಂದ್ರಿಕೆ' ಗಂಡ, ಹೆಂಡತಿ ಎನ್ನುವ ಹಾಸ್ಯಭಾವದಿಂದ ಮೂಲೆಮನೆ ವಿರುಪಣ್ಣ ಕಲ್ಲಂಗಡಿ ಹಣ್ಣುಕೊಳ್ಳುವಾಗ ಚಂದ್ರಕಾಂತನಿಗೆ 'ನಿನ್ ಹೆಂಡ್ತಿ ಕೆಂಪಗಿರಬೇಕಪ್ಪ' ಅಂದರೆ ಚಂದ್ರಿಕೆ ಕೆಂಪಗಿರಬೇಕು ಎಂದು ಹೇಳಿದ್ದು.

**-ಹೆಚ್.ಬಿ. ಮಂಜುನಾಥ್**
ಹಿರಿಯ ಪತ್ರಕರ್ತ, ದಾವಣಗೆರೆ.

# ನಾವೀನ್ಯತೆ ಮತ್ತು ಯುವ ಸಬಲೀಕರಣವನ್ನು ಆಚರಿಸುವ ದಿನ




## ಇಂದು ರಾಷ್ಟ್ರೀಯ ವಿಜ್ಞಾನ ದಿನ

ಫೆಬ್ರವರಿ 28 ರಂದು ವಾರ್ಷಿಕವಾಗಿ ಆಚರಿಸಲಾಗುವ ರಾಷ್ಟ್ರೀಯ ವಿಜ್ಞಾನ ದಿನವು, 1928 ರಲ್ಲಿ ಖ್ಯಾತ ಭಾರತೀಯ ಭೌತಶಾಸ್ತ್ರಜ್ಞ ಸರ್ ಚಂದ್ರಶೇಖರ ವೆಂಕಟ ರಾಮನ್ ಅವರು ರಾಮನ್ ಪರಿಣಾಮದ ಕ್ರಾಂತಿಕಾರಿ ಆವಿಷ್ಕಾರವನ್ನು ಸ್ಮರಿಸುತ್ತದೆ. ಈ ದಿನವು ವೈಜ್ಞಾನಿಕ ವಿಚಾರಣೆ ಮತ್ತು ನಾವೀನ್ಯತೆಗೆ ಗೌರವವಾಗಿ ಕಾರ್ಯನಿರ್ವಹಿಸುತ್ತದೆ, ಆಧುನಿಕ ಸಮಾಜವನ್ನು ರೂಪಿಸುವಲ್ಲಿ ವಿಜ್ಞಾನದ ಪ್ರಮುಖ ಪಾತ್ರವನ್ನು ಎತ್ತಿ ತೋರಿಸುತ್ತದೆ. ಸಮುದ್ರದ ಬಣ್ಣದ ಬಗ್ಗೆ ಸರ್ ಸಿ.ವಿ. ರಾಮನ್ ಅವರ ಕುತೂಹಲವು ಬೆಳಕಿನ ಚದುರುವಿಕೆಯ ಬಗ್ಗೆ ತನಿಖೆ ನಡೆಸಲು ಕಾರಣವಾಯಿತು, ಇದು ಈಗ ರಾಮನ್ ಪರಿಣಾಮ ಎಂದು ಕರೆಯಲ್ಪಡುವ ಆವಿಷ್ಕಾರದಲ್ಲಿ ಕೊನೆಗೊಂಡಿತು. ಈ ವಿದ್ಯಮಾನವು ಬೆಳಕು ವಿವಿಧ ವಸ್ತುಗಳನ್ನು ಹಾದುಹೋಗುವಾಗ ಅದರ ತರಂಗಾಂತರವನ್ನು ಹೇಗೆ ಬದಲಾಯಿಸುತ್ತದೆ ಎಂಬುದನ್ನು ವಿವರಿಸುತ್ತದೆ, ಆಣ್ವಿಕ ಮತ್ತು ಪರಮಾಣು ರಚನೆಗಳ ಬಗ್ಗೆ ಆಳವಾದ ಒಳನೋಟಗಳನ್ನು ಒದಗಿಸುತ್ತದೆ. ಈ ಸ್ಮರಣೀಯ ಸಾಧನೆಯನ್ನು ಗುರುತಿಸಿ, 1930 ರಲ್ಲಿ ರಾಮನ್ ಅವರಿಗೆ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ನೀಡಲಾಯಿತು, ಇದು ಜಾಗತಿಕ ವೇದಿಕೆಯಲ್ಲಿ ಭಾರತೀಯ ವಿಜ್ಞಾನಕ್ಕೆ ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ.

1986 ರಲ್ಲಿ, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿಯ (NCSTC) ಪ್ರಸ್ತಾವನೆಯ ಮೇರೆಗೆ ಭಾರತ ಸರ್ಕಾರ ಫೆಬ್ರವರಿ 28 ಅನ್ನು ರಾಷ್ಟ್ರೀಯ ವಿಜ್ಞಾನ ದಿನವೆಂದು ಘೋಷಿಸಿತು. 1987 ರಲ್ಲಿ ಉದ್ಘಾಟನಾ ಆಚರಣೆಯು ದೇಶಾದ್ಯಂತ ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸುವ ಮತ್ತು ವೈಜ್ಞಾನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಿಕೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿತ್ತು. ಅಂದಿನಿಂದ, ಈ ದಿನವನ್ನು ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು ಮತ್ತು ವೈಜ್ಞಾನಿಕ ಸಂಸ್ಥೆಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಆಚರಿಸಲಾಗುತ್ತಿದೆ, ಇದು ಕುತೂಹಲ ಮತ್ತು ನಾವೀನ್ಯತೆಯ ಸಂಸ್ಕೃತಿಯನ್ನು ಬೆಳೆಸುತ್ತದೆ. ಪ್ರತಿ ವರ್ಷ, ಚರ್ಚೆಗಳು ಮತ್ತು ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುವ ನಿರ್ದಿಷ್ಟ ವಿಷಯದೊಂದಿಗೆ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಗುತ್ತದೆ.

2025 ರ ಧ್ಯೇಯ ವಾಕ್ಯ "ವಿಕಸಿತ ಭಾರತಕ್ಕಾಗಿ ವಿಜ್ಞಾನ ಮತ್ತು ನಾವೀನ್ಯತೆಯಲ್ಲಿ ಜಾಗತಿಕ ನಾಯಕತ್ವಕ್ಕಾಗಿ ಭಾರತೀಯ ಯುವಕರನ್ನು ಸಬಲೀಕರಣಗೊಳಿಸುವುದು", ಭಾರತದ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯನ್ನು ಮುನ್ನಡೆಸುವಲ್ಲಿ ಯುವ ಮನಸ್ಸುಗಳ ನಿರ್ಣಾಯಕ ಪಾತ್ರವನ್ನು ಒತ್ತಿ ಹೇಳುತ್ತದೆ. 'ಅಭಿವೃದ್ಧಿ ಹೊಂದಿದ ಭಾರತ' ಎಂಬ ಅರ್ಥವನ್ನು ನೀಡುವ "ವಿಕಸಿತ ಭಾರತ" ಎಂಬ ಪರಿಕಲ್ಪನೆಯು ನಿರಂತರ ನಾವೀನ್ಯತೆ, ಸಂಶೋಧನೆ ಮತ್ತು ತಂತ್ರಜ್ಞಾನ ಆಧಾರಿತ ಬೆಳವಣಿಗೆಯ ಮೂಲಕ ಜಾಗತಿಕ ನಾಯಕನಾಗಿ ಹೊರಹೊಮ್ಮುವ ರಾಷ್ಟ್ರದ ಆಕಾಂಕ್ಷೆಯನ್ನು ಪ್ರತಿಬಿಂಬಿಸುತ್ತದೆ. ಈ ಧ್ಯೇಯ ವಾಕ್ಯವು ಯುವ ವಿಜ್ಞಾನಿಗಳು, ಸಂಶೋಧಕರು ಮತ್ತು ವಿದ್ಯಾರ್ಥಿಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅತ್ಯಾಧುನಿಕ ಪ್ರಗತಿಯನ್ನು ಅಳವಡಿಸಿಕೊಳ್ಳುವ ಮೂಲಕ ದೇಶದ ಪ್ರಗತಿಗೆ ಕೊಡುಗೆ ನೀಡಲು ಪ್ರೇರೇಪಿಸುವ ಗುರಿಯನ್ನು ಹೊಂದಿದೆ. ಇದು ವೈಜ್ಞಾನಿಕ ಸಾಕ್ಷರತೆಯನ್ನು ಪೋಷಿಸುವುದು, ನಾವೀನ್ಯತೆಯನ್ನು ಬೆಳೆಸುವುದು ಮತ್ತು ಜಾಗತಿಕ ಸಂಶೋಧನಾ ಸಹಯೋಗಗಳಲ್ಲಿ ಭಾರತದ ಉಪಸ್ಥಿತಿಯನ್ನು ಹೆಚ್ಚಿಸುವ ಮಹತ್ವವನ್ನು ಒತ್ತಿ ಹೇಳುತ್ತದೆ.

2025 ರ ರಾಷ್ಟ್ರೀಯ ವಿಜ್ಞಾನ ದಿನವು ಯುವಕರನ್ನು ಪ್ರೇರೇಪಿಸಲು ಮತ್ತು ತೊಡಗಿಸಿಕೊಳ್ಳಲು ವಿನ್ಯಾಸಗೊಳಿಸ ಲಾದ ಹಲವಾರು ಕಾರ್ಯಕ್ರಮಗಳು ಮತ್ತು ಚಟುವಟಿಕೆ ಗಳಿಗೆ ಸಾಕ್ಷಿಯಾಗಲಿದೆ. ಶಾಲೆಗಳು, ಕಾಲೇಜುಗಳು ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ವಿಜ್ಞಾನ ಪ್ರದರ್ಶನಗಳು ಮತ್ತು ಮೇಳಗಳನ್ನು ಆಯೋಜಿಸಲಾಗುವುದು, ಇದು ಯುವ ನಾವೀನ್ಯಕಾರರಿಗೆ ತಮ್ಮ ಕೆಲಸವನ್ನು ಪ್ರದರ್ಶಿಸಲು ವೇದಿಕೆಯನ್ನು ಒದಗಿಸುತ್ತದೆ. ತಜ್ಞರ ನೇತೃತ್ವದ ಕಾರ್ಯಾಗಾರಗಳು ಮತ್ತು ವಿಚಾರ ಸಂಕಿರಣಗಳು ಉದಯೋನ್ಮುಖ ವೈಜ್ಞಾನಿಕ ಕ್ಷೇತ್ರಗಳ ಬಗ್ಗೆ ಒಳನೋಟಗಳನ್ನು ನೀಡುತ್ತವೆ, ಅಂದರೆ ರಸಪ್ರಶ್ನೆಗಳು, ಚರ್ಚೆಗಳು ಮತ್ತು ಪ್ರಬಂಧ ಬರವಣಿಗೆಯಂತಹ ಸ್ಪರ್ಧೆಗಳು ವಿದ್ಯಾರ್ಥಿಗಳನ್ನು ವೈಜ್ಞಾನಿಕ ಪ್ರಗತಿಯ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸಲು ಪ್ರೋತ್ಸಾಹಿಸುತ್ತವೆ.

ಯುವ ಸಬಲೀಕರಣದ ಮೇಲೆ ಕೇಂದ್ರೀಕರಿಸಿ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸುವ ಮೂಲಕ, ಭಾರತವು ಮುಂದಿನ ಪೀಳಿಗೆಯ ವಿಜ್ಞಾನಿಗಳು ಮತ್ತು ನಾವೀನ್ಯಕಾರರನ್ನು ಪೋಷಿಸುವಲ್ಲಿ ಒಂದು ಹೆಜ್ಜೆ ಮುಂದಿಡುತ್ತಿದೆ. ಜಾಗತಿಕ ನಾಯಕತ್ವ ಮತ್ತು ನಾವೀನ್ಯತೆಯ ಮೇಲಿನ ಒತ್ತು, ವೈಜ್ಞಾನಿಕ ಶ್ರೇಷ್ಠತೆ ಮತ್ತು ತಾಂತ್ರಿಕ ಪ್ರಗತಿಯ ಕೇಂದ್ರವಾಗುವ ರಾಷ್ಟ್ರದ ದೃಷ್ಟಿಕೋನಕ್ಕೆ ಅನುಗುಣವಾಗಿದೆ. ಯುವ ಮನಸ್ಸುಗಳು ಸಂಶೋಧನೆ, ನಾವೀನ್ಯತೆ ಮತ್ತು ಸಹಯೋಗದ ಪ್ರಯತ್ನಗಳಲ್ಲಿ ತೊಡಗಿಸಿಕೊಂಡಾಗ, 2025 ರ ರಾಷ್ಟ್ರೀಯ ವಿಜ್ಞಾನ ದಿನವು ಭಾರತ ಮತ್ತು ಜಗತ್ತಿಗೆ ಉಜ್ವಲ ಮತ್ತು ಹೆಚ್ಚು ಮುಂದುವರೆದ ಭವಿಷ್ಯವನ್ನು ರೂಪಿಸುವಲ್ಲಿ ವಿಜ್ಞಾನವು ಪ್ರಮುಖವಾಗಿದೆ ಎಂಬುದನ್ನು ನೆನಪಿಸುತ್ತದೆ.

ಇದಲ್ಲದೆ, ರಾಷ್ಟ್ರೀಯ ವಿಜ್ಞಾನ ದಿನವು ವಿಜ್ಞಾನವು ಎಲ್ಲರನ್ನೂ ಒಳಗೊಳ್ಳುವ ಮತ್ತು ಪ್ರವೇಶಿಸಬಹು ದಾದದ್ದಾಗಿರಬೇಕು ಎಂಬುದನ್ನು ನೆನಪಿಸುತ್ತದೆ. ಪ್ರಾತಿನಿಧ್ಯವಿಲ್ಲದ ಸಮುದಾಯ ಗಳ ಭಾಗವಹಿಸುವಿಕೆ ಯನ್ನು ಉತ್ತೇಜಿಸುವುದು, ಶಿಕ್ಷಕರು, ವಿಜ್ಞಾನಿಗಳು ಮತ್ತು ನೀತಿ ನಿರೂಪಕರು ಚಿಕ್ಕ ವಯಸ್ಸಿನಿಂದಲೇ ಕುತೂಹಲ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವ ವಾತಾವರಣವನ್ನು ಸೃಷ್ಟಿಸಲು ಒಟ್ಟಾಗಿ ಕೆಲಸ ಮಾಡಬೇಕು. ವಿಜ್ಞಾನ ಮತ್ತು ನಾವೀನ್ಯತೆಯಲ್ಲಿ ಜಾಗತಿಕ ನಾಯಕನಾಗುವ ತನ್ನ ದೃಷ್ಟಿಕೋನದತ್ತ ಭಾರತ ಸಾಗುತ್ತಿರುವಾಗ, 2025 ರ ರಾಷ್ಟ್ರೀಯ ವಿಜ್ಞಾನ ದಿನವು ಕ್ರಿಯೆಗೆ ಕರೆಯಾಗಿ ನಿಂತಿದೆ. ಜ್ಞಾನ, ಆವಿಷ್ಕಾರ ಮತ್ತು ತಾಂತ್ರಿಕ ಪ್ರಗತಿಯು ದಾರಿ ತೋರಿಸುವ ಭವಿಷ್ಯಕ್ಕೆ ಕೊಡುಗೆ ನೀಡುವಂತೆ ಪ್ರತಿಯೊಬ್ಬ ವಿದ್ಯಾರ್ಥಿ, ಶಿಕ್ಷಣ ತಜ್ಞ ಮತ್ತು ವಿಜ್ಞಾನಿಗಳನ್ನು ಒತ್ತಾಯಿಸುತ್ತದೆ.

**- ಡಾ. ಕೌಶಿಕ್ ಎಂ.ಸಿ.,**
ಸಹಾಯಕ ಪ್ರಾಧ್ಯಾಪಕರು,
ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.
9886701926.

# ನಗರದಲ್ಲಿ ಇಂದು 'ಚಿಗುರು ಚಿತ್ತಾರ' ಚಿತ್ರಕಲಾ ಪ್ರದರ್ಶನ

ದಾವಣಗೆರೆ, ಫೆ.27- ದೃಶ್ಯ ಕಲಾ ಮಹಾವಿದ್ಯಾಲಯದ ವಜ್ರಮಹೋತ್ಸವ ಸಂಭ್ರಮದ ಅಂಗವಾಗಿ ನಾಳೆ ದಿನಾಂಕ 28 ರ ಶುಕ್ರವಾರ ಬೆಳಿಗ್ಗೆ 9.30 ಕ್ಕೆ 'ಚಿಗುರು ಚಿತ್ತಾರ'ಚಿತ್ರಕಲಾ ಪ್ರದರ್ಶನ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸದಸ್ಯ ಮತ್ತು ಯೂನಿವರ್ಸಿಟಿ ಕಾಲೇಜ್ ಆಫ್ ವಿಜುಯಲ್ ಆರ್ಟ್ಸ್ ಅಲುಮ್ನಿ ಅಸೋಸಿಯೇಷನ್ ಅಧ್ಯಕ್ಷ ವೈ.ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ಎಂ.ಸಿ. ರಮೇಶ್ ಕಾರ್ಯಕ್ರಮ ಉದ್ಘಾಟಿಸುವರು. ಚಿತ್ರ ಕಲಾ ಪ್ರದರ್ಶನವನ್ನು ಡಯಟ್ ಪ್ರಾಚಾರ್ಯ ರಾದ ಎಸ್. ಗೀತಾ ಉದ್ಘಾಟಿಸಲಿದ್ದಾರೆ. ದಾವಣ ಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಅಧ್ಯಕ್ಷತೆ ವಹಿಸುವರು. ಚಿತ್ರ ಕಲಾವಿದ ಶ್ರೀನಾಥ್ ಬಿದರೆ, ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಜೈರಾಜ್ ಚಿಕ್ಕಪಾಟೀಲ್, ಡಾ. ಸತೀಶ್ ಕುಮಾರ್ ವಲ್ಲೇಪುರೆ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಚಂದ್ರಶೇಖರ್ ಎಸ್. ಸಂಗಾ, ಎಂ. ರಾಮು, ಎನ್. ಪ್ರಶಾಂತ್, ವಿನಯ್ ಸೊನ್ನದ್, ರಾಘವೇಂದ್ರ ನಾಯಕ, ಆತೀಕ್ ವುಲ್ಲಾ, ಬಿ. ಅಚ್ಚುತಾನಂದ ಉಪಸ್ಥಿತರಿದ್ದರು.

# ಇನ್ನರ್‌ವ್ಹೀಲ್‌ನಿಂದ ವಿವಿಧ ಸ್ಪರ್ಧೆಗಳು

ದಾವಣಗೆರೆ, ಫೆ. 27- ಇನ್ನರ್ ವ್ಹೀಲ್ ಸಂಸ್ಥೆ ವಿದ್ಯಾನಗರ ವತಿಯಿಂದ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ನಮ್ಮ ದೇಶ ಅಭಿವೃದ್ಧಿ ಹೊಂದಲು ಮಹಿಳೆಯರ ಪಾತ್ರವೇನು ವಿಷಯ ಕುರಿತು ಪ್ರಬಂಧ ಸ್ಪರ್ಧೆ, ಬೆಂಕಿ ಇಲ್ಲದ ಅಡುಗೆ ಮಾಡುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಸಕ್ತರು ನಾಳೆ ದಿನಾಂಕ 28ರೊಳಗೆ ಹೆಸರು ನೋಂದಾಯಿಸಬಹುದು ಎಂದು ಪ್ರೇಮಾ ಮಹೇಶ್ವರಪ್ಪ (94810 10502), ಭಾಗ್ಯ ವೀರಣ್ಣ (94484 05066) ತಿಳಿಸಿದ್ದಾರೆ.

# ಒಡೆದು ಆಳುವ ಕೆಲಸದ ಹಿಂದೆ ಕೆಟ್ಟ ಅಜೆಂಡಾ.!

(5ನೇ ಪುಟದಿಂದ) ಎಂದು ಮಾಧ್ಯಮಗಳಿಂದ ತಿಳಿದುಬರುತ್ತಿದೆ.

ಇದಕ್ಕೆ ಮತ್ತೊಂದು ಜಾತಿಗಣತಿ ಉತ್ತರವಲ್ಲ, ಇಡೀ ವೀರಶೈವ/ಲಿಂಗಾಯತರೆಲ್ಲ ಒಂದೇ ಶೀರ್ಷಿಕೆಯಡಿ ಬರಬೇಕು, ಆಗ ಮಾತ್ರ ಸಮುದಾಯದ ಯುವಜನರಿಗೆ ಮೀಸಲಾತಿ ಸಿಗುತ್ತದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಲಿಂಗಾಯತ ಸಮುದಾಯದಲ್ಲಿ ಉಪಪಂಗಡಗಳ ಮೇಲಾಟ ಕೊನೆಯಾಗದೆ ಉಳಿಗಾಲವಿಲ್ಲ, ಒಗ್ಗಟ್ಟಿನ ಯತ್ನ ಇಂದು ಆರಂಭವಾಗಿದೆ, ಸಮುದಾಯದ ಒಳಗಿನ ವ್ಯತ್ಯಾಸಗಳು ಇನ್ನು ಮುಂದೆ ಇರಬಾರದು ಎಂದು ಕರೆ ನೀಡಿದರು.

# ಬಿಜೆಪಿ ಕೀರ್ತಿ ಪತಾಕೆಗೆ ಪ್ರತಿರೋಧದ ಕಾರಣವೇ ಕ್ಷೇತ್ರ ಮರು ವಿಂಗಡಣೆ ಹುನ್ನಾರ: ಸಿಎಂ ಆರೋಪ

ಬೆಂಗಳೂರು, ಫೆ. 27- ಕ್ಷೇತ್ರ ಮರುವಿಂಗಡಣೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಉತ್ಸಾಹ ಹಾಗೂ ಗೃಹ ಸಚಿವ ಅಮಿತ್ ಷಾ ಹೇಳಿಕೆ ಗಮನಿಸಿದರೆ ಬಿಜೆಪಿ ಕೀರ್ತಿ ಪತಾಕೆಗೆ ಪ್ರತಿರೋಧ ಒಡ್ಡುತ್ತಿರುವ ದಕ್ಷಿಣ ಭಾರತ ರಾಜ್ಯಗಳ ಜನತೆಯನ್ನು ಶಿಕ್ಷಿಸುವ ದುರುದ್ದೇಶ ಇರುವಂತೆ ಕಾಣಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕೇಂದ್ರದ ಎನ್‌ಡಿಎ ಸರ್ಕಾರದ ಅನ್ಯಾಯದ ವಿರುದ್ಧ ಸಮಗ್ರ ಹೋರಾಟ ನಡೆಸಲು ದಕ್ಷಿಣ ಭಾರತ ರಾಜ್ಯಗಳ ಮುಖಂಡರ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದಿದ್ದಾರೆ.

ಕ್ಷೇತ್ರ ಮರುವಿಂಗಡಣೆ ವಿಷಯದಲ್ಲಿ ದಕ್ಷಿಣ ಭಾರತ ರಾಜ್ಯಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂಬ ಅಮಿತ್ ಷಾ ಹೇಳಿಕೆ ನಂಬಿಕೆಗೆ ಅರ್ಹವಲ್ಲ, ಇದು ದಕ್ಷಿಣ ರಾಜ್ಯಗಳಲ್ಲಿ ಗೊಂದಲ ಹುಟ್ಟಿಸುವ ದುರುದ್ದೇಶದಿಂದ ಕೂಡಿದೆ.

ಅವರ ಹೇಳಿಕೆ ಗಮನಿಸಿದರೆ, ಒಂದೋ ಅವರಿಗೆ ಮಾಹಿತಿ ಕೊರತೆ ಇದೆ, ಇಲ್ಲವೇ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತ ರಾಜ್ಯಗಳಾದ ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಆಂಧ್ರ ಪ್ರದೇಶಕ್ಕೆ ಅನ್ಯಾಯ ಮಾಡುವ ದುರುದ್ದೇಶ ಇದೆ ಎಂಬುದಾಗಿ ಅರ್ಥಮಾಡಿಕೊಳ್ಳಬಹುದು ಎಂದರು.

ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಮುಖ್ಯಮಂತ್ರಿ, ದಕ್ಷಿಣ ಭಾರತ ರಾಜ್ಯಗಳಿಗೆ ಅನ್ಯಾಯ ಮಾಡಬಾರದೆಂಬ ಸದುದ್ದೇಶವಿದ್ದರೆ, ಕ್ಷೇತ್ರ ಮರುವಿಂಗಡಣೆ ಜನಸಂಖ್ಯೆ ಅನುಪಾತದ ಆಧಾರದಲ್ಲಿ ಮಾಡಬೇಕೇ ಅಥವಾ ಲೋಕಸಭಾ ಸದಸ್ಯರ ಈಗಿನ ಸಂಖ್ಯೆ ಅನುಪಾತದಲ್ಲಿ ಮಾಡಬೇಕೇ ಎಂಬ ಬಗ್ಗೆ ಷಾ ಉತ್ತರಿಸಬೇಕು ಎಂದಿದ್ದಾರೆ.

ಇತ್ತೀಚಿನ ಜನಸಂಖ್ಯೆ ಅನುಪಾತದಲ್ಲಿ ಕ್ಷೇತ್ರ ಮರುವಿಂಗಡಣೆ ನಡೆದರೆ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಕಟ್ಟಿಟ್ಟ ಬುತ್ತಿ ಎನ್ನುವುದು ನಮಗೆ ಸ್ಪಷ್ಟವಾಗಿ ಅರ್ಥವಾಗಿದೆ, ಈ ಅನ್ಯಾಯ ತಪ್ಪಿಸಲಿಕ್ಕಾಗಿಯೇ ಸಂವಿಧಾನಕ್ಕೆ ತಿದ್ದುಪಡಿ ತಂದು ಎರಡು ಕ್ಷೇತ್ರಗಳ ಮರುವಿಂಗಡಣೆಗೆ 1971ರ ಜನಗಣತಿಯನ್ನೇ ಆಧಾರವಾಗಿಟ್ಟುಕೊಳ್ಳಲಾಗಿತ್ತು.

ಕಳೆದ 50 ವರ್ಷಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳು ಪರಿಣಾಮಕಾರಿ ಕ್ರಮಗಳ ಮೂಲಕ ಜನಸಂಖ್ಯೆ ನಿಯಂತ್ರಿಸಿರುವುದು ಮಾತ್ರವಲ್ಲ, ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿವೆ.

ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶದಂತಹ ಉತ್ತರ ಭಾರತದ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಸಂಪೂರ್ಣ ವಿಫಲವಾಗಿವೆ, ಮಾತ್ರವಲ್ಲ, ಅಭಿವೃದ್ಧಿ ಹಾದಿಯಲ್ಲಿ ಇನ್ನೂ ಕುಂಟುತ್ತಾ ಸಾಗಿವೆ.

ಇತ್ತೀಚಿನ ಜನಗಣತಿಯ ಜನಸಂಖ್ಯೆ ಅನುಪಾತದ ಮೇಲೆ ಕ್ಷೇತ್ರ ಮರುವಿಂಗಡಣೆ ಮಾಡಿದರೆ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಲಿದೆ, ಇಲ್ಲವೇ, ಉತ್ತರ ಭಾರತದ ರಾಜ್ಯಗಳ ಕ್ಷೇತ್ರಗಳ ಸಂಖ್ಯೆಯಲ್ಲಿ ಏರಿಕೆ ಆಗಲಾರದು, ಈ ಎರಡೂ ಬೆಳವಣಿಗೆಗಳಿಂದ ದಕ್ಷಿಣದ ರಾಜ್ಯಗಳೇ ನಷ್ಟ ಅನುಭವಿಸಲಿವೆ ಎಂಬ ಸತ್ಯ ಷಾ ಅವರಿಗೆ ತಿಳಿದಿಲ್ಲವೇ.



ಕ್ಷೇತ್ರ ಮರುವಿಂಗಡಣೆ ಪರಿಣಾಮಗಳ ಕುರಿತು ನಡೆದಿರುವ ಹಲವು ಅಧ್ಯಯನಗಳ ಪ್ರಕಾರ ಇತ್ತೀಚಿನ ಜನಗಣತಿ (2021 ಇಲ್ಲವೇ 2031) ಮಾತ್ರ ಆಧರಿಸಿ ಕ್ಷೇತ್ರ ಮರುವಿಂಗಡಣೆ ನಡೆದರೆ ಕರ್ನಾಟಕದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 26ಕ್ಕೆ ಇಳಿಯುವ ಸಾಧ್ಯತೆ ಇದೆ.

ಹಾಗೆಯೇ ಆಂಧ್ರ ಪ್ರದೇಶದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 42ರಿಂದ 34, ಕೇರಳದ ಸಂಖ್ಯೆ 20ರಿಂದ 12ಕ್ಕೆ, ತಮಿಳುನಾಡಿನ ಸಂಖ್ಯೆ 39ರಿಂದ 31ಕ್ಕೆ ಇಳಿಯಲಿದೆ.

ಇದೇ ವೇಳೆ ಉತ್ತರ ಪ್ರದೇಶದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 80 ರಿಂದ 91, ಬಿಹಾರದ ಸಂಖ್ಯೆ 40 ರಿಂದ 50, ಮಧ್ಯಪ್ರದೇಶದ ಸಂಖ್ಯೆ 29ರಿಂದ 33ಕ್ಕೆ ಏರಿಕೆಯಾಗಲಿದ್ದು, ಇದನ್ನು ಅನ್ಯಾಯ ಎನ್ನದೆ ಬೇರೇನು ಹೇಳಲು ಸಾಧ್ಯ.

ಖಂಡಿತ ಇದನ್ನು ಸಹಿಸಲು ಸಾಧ್ಯವಿಲ್ಲ, ಕ್ಷೇತ್ರ ಮರುವಿಂಗಡಣೆಯಿಂದ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಆಗಬಾರದೆಂದರೆ ಒಂದೋ 1971ರ ಜನಗಣತಿಯನ್ನು ಆಧಾರವಾಗಿಟ್ಟುಕೊಳ್ಳಬೇಕು, ಇಲ್ಲವೇ, ಜನಸಂಖ್ಯೆ ಮಾನದಂಡ ಕೈಬಿಟ್ಟು ಈಗಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಅನುಪಾತಕ್ಕನುಗುಣವಾಗಿ ಹೆಚ್ಚಿಸಬೇಕು ಎಂದಿದ್ದಾರೆ.

ಕರ್ನಾಟಕದ ಜನತೆ ಬಿಜೆಪಿ ಬೆಂಬಲಿಸದಿದ್ದರೆ ರಾಜ್ಯಕ್ಕೆ ನರೇಂದ್ರ ಮೋದಿ ಆಶೀರ್ವಾದ ಇರುವುದಿಲ್ಲ ಎಂಬ ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ನೀಡಿದ್ದ ಹೇಳಿಕೆ, ನಮ್ಮ ರಾಜ್ಯದ ವಿರುದ್ಧ ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಒಂದೊಂದು ಕ್ರಮದಲ್ಲಿಯೂ ನಿಜವಾಗುತ್ತಿದೆ ಎಂಬುದು ಭಾಸವಾಗುತ್ತಿದೆ.

ತೆರಿಗೆ ಹಂಚಿಕೆ, ಜಿಎಸ್‌ಟಿ, ಪ್ರಕೃತಿ ವಿಕೋಪ ಪರಿಹಾರ ನೀಡಿಕೆಯಲ್ಲಿ ಅನ್ಯಾಯ, ರಾಜ್ಯಕ್ಕೆ ಕಂಟಕವಾಗಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಯುಜಿಸಿ ನಿಯಮಾವಳಿಗಳ ತಿದ್ದುಪಡಿ ಸೇರಿದಂತೆ, ಕೇಂದ್ರದ ಪ್ರತಿಯೊಂದು ಕ್ರಮವೂ ರಾಜ್ಯವನ್ನು ಶಿಕ್ಷಿಸುವ ದುರುದ್ದೇಶದಿಂದ ಕೂಡಿದೆ ಎನ್ನುವುದು ಸ್ಪಷ್ಟವಾಗುತ್ತದೆ ಎಂದು ಟೀಕಿಸಿದ್ದಾರೆ.

ಎಲ್ಲ ಅನ್ಯಾಯಗಳ ವಿರುದ್ಧ ರಾಷ್ಟ್ರಮಟ್ಟದಲ್ಲಿ ದನಿ ಎತ್ತದಂತೆ ತಡೆಯಲು ಸಂಸತ್‌ನಲ್ಲಿ ದಕ್ಷಿಣ ಭಾರತ ರಾಜ್ಯಗಳ ಧ್ವನಿಯನ್ನು ಇನ್ನಷ್ಟು ಕ್ಷೀಣಗೊಳಿಸುವ ದುರುದ್ದೇಶದಿಂದ ಕೇಂದ್ರ ಸರ್ಕಾರ ಕ್ಷೇತ್ರ ಮರುವಿಂಗಡಣೆಯ ಹೊಸ ಅಸ್ತ್ರ ಎತ್ತಿಕೊಂಡಿದೆ.

ರಾಜ್ಯದಿಂದ ಲೋಕಸಭೆಗೆ ಆರಿಸಿಹೋಗಿರುವ ಹದಿನೇಳು ಬಿಜೆಪಿ ಮತ್ತು ಇಬ್ಬರು ಜೆಡಿಎಸ್ ಸದಸ್ಯರು ರಾಜ್ಯಕ್ಕೆ ಆಗುತ್ತಿರುವ ಸರಣಿ ಅನ್ಯಾಯಗಳನ್ನು ನೋಡಿಯೂ ಜೀತದಾಳುಗಳಂತೆ ಬಾಯಿಗೆ ಬೀಗ ಹಾಕಿಕೊಂಡು ಕುಳಿತಿದ್ದರೆ, ರಾಜ್ಯದಲ್ಲಿನ ಬಿಜೆಪಿ ನಾಯಕರು ಪರಸ್ಪರ ಕೆಸರೆರಚಾಟ, ಬೀದಿ ಜಗಳದಲ್ಲಿ ಮಗ್ನರಾಗಿದ್ದಾರೆ.

ಜಾತಿ-ಧರ್ಮ, ಪಕ್ಷ-ಪಂಥಗಳ ಭೇದ ಮರೆತು ಕನ್ನಡಿಗರೆಲ್ಲರೂ ಒಂದಾಗಿ ಒಂದೇ ದನಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ದನಿ ಎತ್ತಬೇಕಿದೆ ಎಂದಿದ್ದಾರೆ.

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಬೇಕಾಗಿದ್ದಾರೆ**
ಬೋಂದಾಡೆ ಎಂಟರ್‌ಪ್ರೈಸಸ್
ಟ್ಯಾಲಿ, ಅಕೌಂಟೆಂಟ್ ಕೆಲಸಕ್ಕೆ 2 ವರ್ಷ ಅನುಭವವುಳ್ಳ ಮಹಿಳೆ ಬೇಕಾಗಿದ್ದಾರೆ.
ಸ್ಥಳ : 1334/1, ಹದಡಿ ರಸ್ತೆ, ತರಳಬಾಳು ಬಡಾವಣೆ, ದಾವಣಗೆರೆ 577005
98869 77879, 98865 08965

**ಬೇಕಾಗಿದ್ದಾರೆ**
ಎಸ್.ಬಿ.ಎಂ. ಬ್ಯಾಂಕ್ ಎದುರು, ಮಂಡಿಪೇಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
99863 93177

**ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ**
ಕುಕ್ಸ್, ನಾರ್ಥ್ ಇಂಡಿಯನ್, ಚೈನೀಸ್, ತಂದೂರಿ ಕಿಚನ್ ಸಹಾಯಕರು
ಶೆಟ್ಟಿ ರೆಸ್ಟೋರೆಂಟ್
ಡೆಂಟಲ್ ಕಾಲೇಜ್ ಎದುರು, ದಾವಣಗೆರೆ.
7411309214, 7738762485

**ಟ್ಯಾಂಕರ್ ಲಾರಿ ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222
99001 42052

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಕರ್ಷಕ ಸಂಬಳ ನೀಡಲಾಗುವುದು.
ಸಂಪರ್ಕಿಸಿ :
88849 89666

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಹೋಟೇಲ್ ಉದ್ಯಮದಲ್ಲಿ ಅನುಭವ ಇರುವ ಮ್ಯಾನೇಜರ್ ಮತ್ತು ರೊಟ್ಟಿ ಮಾಡುವ ಮಹಿಳೆಯರು ಕ್ಲೀನಿಂಗ್ ಮಾಡಲು, ಸಪ್ಲೈ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**Name Clarification**
I D. Govindaraju C/o Govindappa 65 year Resident @ 1599/25, Ruthu Nilaya, C block, Jeevan Bhima Nagar, Saraswati Layout, Davangere-577 005, That in my name has been Entered in my Aadhar Card as D. Govindaraju but my name has been Entered in my passport bearing No. M6790379 as Govindaraj. above said two name are me only none else. I wish to continue my name as D. Govindaraju sworn before Notary public. Davangere. on 27.02.2025.
Sd/- D. Govindaraju

**ಕೆಲಸಕ್ಕೆ ಬೇಕಾಗಿದ್ದಾರೆ**
ಪಾಟೀಲ್ ಏಜೆನ್ಸೀಸ್
APE Auto ಡ್ರೈವರ್ -1
ಡೆಲಿವರಿ ಬಾಯ್ -1, ಸೇಲ್ಸ್ ಮ್ಯಾನ್ - 1
90606 60949
98803 28444

**ಮನೆ ಬಾಡಿಗೆಗೆ/ಲೀಸ್‌ಗಿದೆ**
1 BHK, ನಂ. 164, 10ನೇ ಕ್ರಾಸ್, ಎ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
90351 09371

**STAFF REQUIRED FOR HOSPITAL**
Sharp 9:45am to 3pm and 6pm to 9pm.
94488 86026

**ಸೈಟ್ ಮತ್ತು ಮನೆಗಳು ಮಾರಾಟಕ್ಕಿವೆ**
MCC 'B' 40x60 ಪಶ್ಚಿಮ,
MCC 'B' 40x60 ಉತ್ತರ ಮನೆ,
MCC 'B' 40x60 ಪೂರ್ವ ಸೈಟ್.
ಏಜೆಂಟರು
81231 15137

**ಸೈಟುಗಳು ಮಾರಾಟಕ್ಕಿವೆ**
SS B 40x66 ಪಶ್ಚಿಮ, SS B 35x70 ಪೂರ್ವ, 40x60 ದಕ್ಷಿಣ, SS B ಬನಶಂಕರಿ ಬಡಾವಣೆ 30x65 ಪೂರ್ವ.
ಏಜೆಂಟರು
81231 15137

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ ಬಾಯ್ಸ್ - ಪಿಯುಸಿ/sslc
2) ಆಪೇ ಆಟೋ ಡ್ರೈವರ್ - ಲೈಸೆನ್ಸ್ ಹಾಗು ಅನುಭವವುಳ್ಳವರು
ಸ್ವವಿವರದೊಂದಿಗೆ ಸಂಪರ್ಕಿಸಿ :
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಡಿಗ್ರಿ ಪಾಸಾದ 18/35 ವರ್ಷದೊಳಗಿನ ಹುಡುಗರು/ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ MS Office ಆದವರಿಗೆ ಮೊದಲ ಆದ್ಯತೆ. ಆಕರ್ಷಕ ವೇತನ ನೀಡಲಾಗುವುದು.
ಈ ಕೆಳಗಿನ ಫೋನ್‌ಗೆ ಸಂಪರ್ಕಿಸಿ :
89708 16788

ನೇತ್ರ ದಾನ ಶ್ರೇಷ್ಠ ದಾನ

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
1. Tele Callers 04 Vacancy
2. Computer Operators - 04
3. Lecturers PCMB - 08
4. Commerce Lect. - 08
5. Arts Lect. - 08
6. Marketing Executives - 05
7. College Bus Drivers - 02
Interview Date:01.03.2025 @10am
Location: Lokikere Main Road, Industrial Area, Davanagere.
Salary From 1 Lakh to 3.6 Lakhs per annum
SAMRUDDHI ACADEMY
81472-62361, 96202-62361

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಆಕರ್ಷಕ ಸಂಬಳವಿರುತ್ತದೆ.
81056 99985
89715 04492

**WANTED**
Computer Operator with Tally Knowledeg
Contact:
VEERANARAYANA TRADERS DAVANGERE
98860 97065

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**WANTED**
Trainee CNC Operators, Diploma Mechanical Engineers, ITI Fitters Trade, Design Engg. Marketing Engineers,
Brancs India Tools Pvt Ltd, 27,Karur Industrial Area, Davangere. Contact No.
92436 19672, 97395 65940

**ಬೆಂಗಳೂರಿನಲ್ಲಿ ಬಿಲ್ಡಿಂಗ್ ಮೇಲ್ವಿಚಾರಕರು ಬೇಕಾಗಿದ್ದಾರೆ**
12 ಗಂಟೆಗಳ ಕೆಲಸ, ಇಂಗ್ಲೀಷ್ ಮತ್ತು ಬೇಸಿಕ್ ಕಂಪ್ಯೂಟರ್ ಜ್ಞಾನ ಅಗತ್ಯವಿದೆ.
ಸಂಬಳ 15000/-
ಬೈಕ್ ಓಡಿಸಬೇಕು. ವಸತಿ ಇದೆ.
97400 98047

**ಮಹಡಿ ಮನೆ ಮಾರಾಟಕ್ಕಿದೆ**
ಹರಿಹರ ನಗರದ ಹರ್ಲಾಪುರ ಬಡಾವಣೆ, 1ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ 20x60 ಅಳತೆಯ ಆರ್‌ಸಿಸಿ ಕಟ್ಟಡದ ಮಹಡಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
89704 95290, 99862 04090

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ (ಹೋಂ ನರ್ಸಿಂಗ್)
ವಯೋವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
ಉಚಿತ ಊಟ, ವಸತಿ. ಸಂಬಳ 18,000 ರಿಂದ 25,000 ರೂ.ವರೆಗೆ
ವಿದ್ಯಾರ್ಹತೆ : 7th, 10th, PUC, ANM, GNM
76193 54274

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಫೆಬ್ರವರಿ 28, 2025


## ಕಾರ್ಮಿಕರ ಪಿಎಫ್, ಇಎಸ್‌ಐ ದುರ್ಬಳಕೆಗೆ ಕಡಿವಾಣ ಹಾಕಿ

### ಶೀಘ್ರ ಇಎಸ್‌ಐ ಜೈವಿಕ ಗುರುತಿನ ಚೀಟಿ ನೀಡಲು ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ವೆಂಕಟೇಶನ್ ಸೂಚನೆ



ದಾವಣಗೆರೆ, ಫೆ.27- ಗುತ್ತಿಗೆ ಪೌರ ಕಾರ್ಮಿಕರು, ಸಫಾಯಿ ಕರ್ಮಚಾರಿಗಳ ಭವಿಷ್ಯನಿಧಿ (ಪಿಎಫ್) ಹಾಗೂ ಇಎಸ್‌ಐ ವ್ಯವಸ್ಥಿತ ದುರ್ಬಳಕೆಗೆ ಕಡಿವಾಣ ಹಾಕಬೇಕು ಎಂದು ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ. ವೆಂಕಟೇಶನ್ ಹೇಳಿದರು.

ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ, ಸಮಾಜ ಕಲ್ಯಾಣ ಇಲಾಖೆ, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗ ಇವರ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ ವಸತಿ ಅಧಿನಿಯಮ-2013 ರ ಕಾಯ್ದೆಯ ಅನುಷ್ಠಾನ ಕುರಿತು ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರ, ಪಟ್ಟಣ, ಸ್ಥಳೀಯ ಸಂಸ್ಥೆಗಳ ಗುತ್ತಿಗೆದಾರರು ಕಾರ್ಮಿಕರ ಹೆಸರಿನಲ್ಲಿ ಪಿಎಫ್, ಇಎಸ್‌ಐ ಹಣ ಮುರಿದುಕೊಂಡು ನಂತರ ಕಟ್ಟದೇ ಮೋಸ ಮಾಡುತ್ತಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಮೋಸ ಮಾಡುತ್ತಿರುವ ಗುತ್ತಿಗೆದಾರರನ್ನು ಪತ್ತೆ ಹಚ್ಚಿ ಕಪ್ಪು ಪಟ್ಟಿಗೆ ಸೇರಿಸಿ ಕಾನೂನು ರೀತ್ಯ ಕ್ರಮಕೈಗೊಳ್ಳಬೇಕು. ಕಾರ್ಮಿಕರಿಗೆ ಇಎಸ್‌ಐ ಜೈವಿಕ ಗುರುತಿನ ಚೀಟಿ ಕೊಡದಿರುವುದು ತುಂಬಾ ದೊಡ್ಡ ತಪ್ಪು ನಗರ ಪಟ್ಟಣ ಸ್ಥಳೀಯ ಸಂಸ್ಥೆ ಅಧಿಕಾರಿಗಳ ಕಾರ್ಯ ವೈಖರಿಯನ್ನು ಸರಿಯಾದ ರೀತಿ ಮಾಡಬೇಕೆಂದರು.

ಸಫಾಯಿ ಕರ್ಮಚಾರಿಗಳು, ಪೌರ ಕಾರ್ಮಿಕರ ಖಾತೆಗೆ ವೇತನ ಸರಿಯಾಗಿ ನೀಡುತ್ತಿಲ್ಲ. ಪಿಎಫ್, ಇಎಸ್‌ಐ ಹಣ ಜಮೆಯಾಗಿದ್ದರ ಬಗ್ಗೆ ಕಾಲ ಕಾಲಕ್ಕೆ ಖಚಿತಪಡಿಸಿಕೊಳ್ಳಬೇಕಿದ್ದು, ತ್ವರಿತವಾಗಿ ಇಎಸ್‌ಐ ಜೈವಿಕ ಗುರುತಿನ ಚೀಟಿ ವಿತರಿಸಲು ಸೂಚಿಸಿದರು.

ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಜಿ.ಎಂ ಮಾತನಾಡಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಹಾಗೂ ಅವರ ಕುಟುಂಬಗಳಲ್ಲಿರುವ ಮಕ್ಕಳಿಗೆ ನಿಯಮನುಸಾರ ಪುನರ್‌ವಸತಿ, ಶಿಕ್ಷಣ, ವಿದ್ಯಾರ್ಥಿ ವೇತನ ಇನ್ನಿತರೆ ಸೌಲಭ್ಯ ಕಲ್ಪಿಸಿ ಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕುಟುಂಬಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಪರಿಶೀಲಿಸಿ, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ದೊರಕಿಸಬೇಕು. ನಿವೇಶನ ಹೊಂದಿರುವ ಹಾಗೂ ನಿವೇಶನ ರಹಿತ ಕುಟುಂಬಗಳ ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಸಲ್ಲಿಸಬೇಕು. ನಿವೇಶನ ರಹಿತ ಕುಟುಂಬಗಳಿಗೆ ಅಂಬೇಡ್ಕರ್ ವಸತಿ ಯೋಜನೆಯಡಿ ನಿವೇಶನ ನೀಡಲಾಗುವುದು.

ಸಮಿತಿಯ ಸದಸ್ಯರು ಪೌರ ಕಾರ್ಮಿಕರು ಆರೋಗ್ಯ ತಪಾಸಣೆಗೆ ಒಳಪಟ್ಟಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದರು.

ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಪ್ರಕರಣದ ಬಗ್ಗೆ ದೂರು ಬಂದ ತಕ್ಷಣ ನಗರ ಸ್ಥಳೀಯ ಸಂಸ್ಥೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಿಸಿದ ಪರಿಶೀಲನಾಧಿಕಾರಿ ತುರ್ತಾಗಿ ಸ್ಥಳ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ಆಯೋಗಕ್ಕೆ ವರದಿ ಸಲ್ಲಿಸಬೇಕು. ಸುರಕ್ಷಾ ಪರಿಕರಗಳನ್ನು ನೀಡಬೇಕೆಂದು ಮಾಹಿತಿ ನೀಡಿದರು.

ಸಫಾಯಿ ಕರ್ಮಚಾರಿಗಳಿಗೆ ಕೇಂದ್ರ ಸರ್ಕಾರ ದಿಂದ ಹಲವಾರು ಸೌಲಭ್ಯಗಳಿದ್ದು, 5 ಲಕ್ಷದಿಂದ 50 ಲಕ್ಷ ರೂ.ಗಳ ವರೆಗೆ ಸಾಲ ಸೌಲಭ್ಯಗಳಿದ್ದು ಕೇಂದ್ರದ ಯೋಜನೆಗಳು ರಾಜ್ಯದಲ್ಲಿ ಸಿಗುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕೆಂದರು. ಪೌರ ಕಾರ್ಮಿಕರಿಗೆ ಶೇ.30 ರಷ್ಟು ಮಾತ್ರ ಗುರುತಿನ ಚೀಟಿಯನ್ನು ನೀಡಿದ್ದು, ಈ ಕೂಡಲೇ ಎಲ್ಲರಿಗೂ ಗುರುತಿನ ಚೀಟಿ ನೀಡಬೇಕೆಂದರು.

ಜಿ.ಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸುರೇಶ್.ಬಿ.ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾಪ್ರಶಾಂತ್, ಜಿ.ಪಂ ಉಪಕಾರ್ಯದರ್ಶಿ ಕೃಷ್ಣನಾಯ್ಕ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ್ ಉಪಸ್ಥಿತರಿದ್ದರು.

## ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ನಿಷೇಧ



ಬೆಂಗಳೂರು,ಫೆ.27- ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಇನ್ನು ಮುಂದೆ ಪ್ಲಾಸ್ಟಿಕ್ ಬಳಸದಂತೆ ರಾಜ್ಯ ಸರ್ಕಾರ ನಿಷೇಧಿಸಿದೆ.

ಈ ಸಂಬಂಧ ಸುದ್ದಿಗಾರರಿಗೆ ಮಾಹಿತಿ ನೀಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಇಡ್ಲಿ, ವಡೆ, ಸಾಂಬಾರ್, ಕಾಫಿ, ಟೀ ಸೇರಿದಂತೆ ಪ್ಲಾಸ್ಟಿಕ್ ಚೀಲಗಳಲ್ಲಿ ಪಾರ್ಸೆಲ್ ನೀಡುವುದೂ ಮಾರಣಾಂತಿಕ ರೋಗಕ್ಕೆ ಕಾರಣವಾಗಲಿದೆ ಎಂದಿದ್ದಾರೆ.

ಇಡ್ಲಿ ತಯಾರಿಕೆ ವೇಳೆ ಪ್ಲಾಸ್ಟಿಕ್ ಬಳಸುತ್ತಿರುವುದು ಅನೇಕ ರೋಗಗಳಿಗೆ ಎಡೆ ಮಾಡಿದೆ, ಅದರಲ್ಲೂ, ರಸ್ತೆ ಬದಿಯ ತಿಂಡಿ ಅಂಗಡಿಗಳು ಪ್ಲಾಸ್ಟಿಕ್ ಬಳಕೆ ಮಾಡಿ ಆಹಾರ ತಯಾರಿಕೆ ಹಾಗೂ ಪಾರ್ಸೆಲ್‌ಗಳಿಗೆ ಬಳಸುತ್ತಿರುವುದು ಅಪಾಯಕಾರಿಯಾಗಿದೆ.

ಹೋಟೆಲ್ ಇಡ್ಲಿ ಮತ್ತಿತರೆ ಆಹಾರಗಳನ್ನು ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಅಪಾಯಕಾರಿ ಪ್ಲಾಸ್ಟಿಕ್ ಅಂಶಗಳಿರುವುದು ಪತ್ತೆಯಾಗಿದೆ.

ಪ್ರಯೋಗಾಲಯದ ಪರೀಕ್ಷೆ ವೇಳೆ ಇಡ್ಲಿ ಮತ್ತಿತರ ಆಹಾರಗಳಲ್ಲಿ ಕಾರ್ಸಿನೋಜೆನಿಕ್ ಅಂಶ ಪತ್ತೆಯಾಗಿದೆ.

ಈ ಹಾನಿಕಾರಕ ಅಂಶದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಆಗಿರುವುದು ಪತ್ತೆಯಾಗಿದೆ, ಮೊದಲು ಇಡ್ಲಿಯನ್ನು ಹತ್ತಿ ಬಟ್ಟೆ ಬಳಸಿ ಬೇಯಿಸುತ್ತಿದ್ದರು, ಆದರೆ, ನಂತರ ಸುಲಭ ವಿಧಾನ ಕಂಡುಕೊಂಡು ಹೋಟೆಲ್ ಉದ್ಯಮ ಪ್ಲಾಸ್ಟಿಕ್ ಬಳಕೆಗೆ ಮೊರೆ ಹೋಗಿದೆ.

ಇದು ಇಡ್ಲಿ ತಯಾರಿಕೆಗೆ ಮಾತ್ರ ಸೀಮಿತವಾಗಿಲ್ಲ, ಪ್ಲಾಸ್ಟಿಕ್ ಬಳಕೆಯಿಂದ ಆಹಾರ ಅಸುರಕ್ಷಿತ ಎಂಬುದು ಪ್ರಯೋಗಾಲದಿಂದ ದೃಢಪಟ್ಟಿದೆ.

ಪ್ಲಾಸ್ಟಿಕ್ ಹಾಳೆ ಶಾಖಕ್ಕೆ ಒಡ್ಡಿಕೊಳ್ಳುವುದರಿಂದ ಹಾನಿಕಾರಕ ವಸ್ತು ಹೊರಸೂಸುತ್ತದೆ, ಇದು (2ನೇ ಪುಟಕ್ಕೆ)

## ಹರಿಹರ ಊರಮ್ಮ ದೇವಿ ಜಾತ್ರೆ ಮುಂಜಾಗ್ರತಾ ಕ್ರಮಕ್ಕೆ ಸೂಚನೆ



**ಪೂರ್ವಭಾವಿ ಸಭೆಯಲ್ಲಿ ಶಾಸಕ ಬಿ.ಪಿ. ಹರೀಶ್**

ಹರಿಹರ,ಫೆ.27- ಬರುವ ಮಾರ್ಚ್ 18 ರಿಂದ 22ರವರೆಗೆ ನಡೆಯುವ ಗ್ರಾಮದೇವತೆ ಊರಮ್ಮ ದೇವಿ ಜಾತ್ರೆಯ ವೇಳೆ ನಗರಕ್ಕೆ ಐದರಿಂದ ಆರು ಲಕ್ಷ ಜನ ಭಕ್ತರು ಆಗಮಿಸಲಿದ್ದು, ಶುದ್ಧ ಕುಡಿಯುವ ನೀರು, ಸ್ವಚ್ಛತೆ, ವಿದ್ಯುತ್ ಪೂರೈಕೆ ಸೇರಿದಂತೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರಸಭೆ ಸಭಾಂಗಣದಲ್ಲಿ ಇಂದು ಕರೆದಿದ್ದ ಹಬ್ಬದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್ ಮಾತನಾಡಿ, ಊರಮ್ಮ ದೇವಿ ಜಾತ್ರೆಯ ಸಮಯದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರಣವಿಲ್ಲದೆ ಗೈರು ಹಾಜರಾಗಲು ಮುಂದಾದರೆ, ಅಂತವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಜನತೆಗೆ ತೊಂದರೆಗಳು ಆಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ನಗರಸಭೆ ವತಿಯಿಂದ ಮಾಡಲಾಗುತ್ತದೆ ಎಂದು ಹೇಳಿದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತ ನಾಡಿ, ಹಬ್ಬಕ್ಕೆ ಸಂಬಂಧಿಸಿದಂತೆ ನಗರಸಭೆ ವತಿ ಯಿಂದ ಹೆಲ್ಪ್ ಲೈನ್ ಸೆಂಟರ್ ಆರಂಭಿಸಿ, ರಸ್ತೆ ದುರಸ್ತಿ ಪಡಿಸಿ ಗುಂಡಿಗಳ ಮುಚ್ಚುವ ವ್ಯವಸ್ಥೆ ಆಗಬೇಕು. ನಗರಸಭೆಯ ಪೌರ ಕಾರ್ಮಿಕರು ಈ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಆದ್ದರಿಂದ ಅವರು ಕೆಲಸಕ್ಕೆ ರಜಾ ಹಾಕಿದಾಗ, ಇತರೆ ನಗರದ ಪೌರ ಕಾರ್ಮಿಕರನ್ನು ಕರೆಸಿಕೊಂಡು ಜನತೆಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ನಗರಸಭೆ ಸದಸ್ಯ ಎ. ವಾಮನಮೂರ್ತಿ ಮಾತನಾಡಿ, ಜಾತ್ರೆಗೆ ಬರುವ ಜನರಿಗೆ ನೀರು ಕೊಡಲಿಕ್ಕೆ ತುಂಗಭದ್ರಾ ನದಿಯಲ್ಲಿ ಸಂಪೂರ್ಣವಾಗಿ ನೀರು ಕಡಿಮೆ ಆಗಿದೆ. ಮತ್ತು ಕವಲೆತ್ತು ಬಳಿ ಇರುವ ಜಾಕ್‌ವೆಲ್‌ನಲ್ಲಿ ಒಂದೇ ಮೋಟರ್ ಇರುವುದರಿಂದ ಅದು ದಿಢೀರ್ ದುರಸ್ತಿಗೆ ಬಂದರೆ ತೊಂದರೆ ಆಗುತ್ತದೆ. ಆದಷ್ಟು ಬೇಗ ಹೊಸದಾಗಿ ಮೋಟರ್ ಅಳವಡಿಸಲು ಮುಂದಾಗಬೇಕು ಎಂದು ಹೇಳಿದರು.

ಸದಸ್ಯ ದಾದಾ ಖಲಂದರ್ ಮಾತನಾಡಿ, ಭಕ್ತರಿಗೆ ತೊಂದರೆ ಆಗದಂತೆ ನಗರಸಭೆ ವತಿಯಿಂದ ಬಾಡಿಗೆ ರೂಪದಲ್ಲಿ ಹೆಚ್ಚಿನದಾಗಿ ನೀರಿನ ಟ್ಯಾಂಕರ್ ಗಳನ್ನು ಪಡೆದು ಸಾರ್ವಜನಿಕರಿಗೆ ನೀರಿನ ಸಮಸ್ಯೆ ಬರದಂತೆ ನೋಡಿಕೊಳ್ಳುವುದು ಸೂಕ್ತವಾಗಿದೆ ಮತ್ತು ಮೊಬೈಲ್ ಶೌಚಾಲಯ (2ನೇ ಪುಟಕ್ಕೆ)

## ಅಕ್ರಮ ಪಂಪ್‌ಸೆಟ್ ತೆರವು, ಭೈರನಪಾದ ಏತ ನೀರಾವರಿ ಜಾರಿ, ಅಪ್ಪರ್ ಭದ್ರಾ ಯೋಜನೆಗೆ ತುಂಗಾ ನೀರನ್ನೇ ಹರಿಸಿ

### ಹೊಳೆಸಿರಿಗೆರೆಯಲ್ಲಿ ನಡೆದ ರೈತರ, ಜನಪ್ರತಿನಿಧಿಗಳ ಸಭೆಯಲ್ಲಿ ಮಹತ್ವದ ನಿರ್ಣಯ



ಮಲೇಬೆನ್ನೂರು, ಫೆ.27- ಭದ್ರಾ ಜಲಾಶಯದಿಂದ ನಾಲೆಗಳಿಗೆ ನೀರು ಹರಿಸಿ ಒಂದೂವರೆ ತಿಂಗಳು ಕಳೆದಿದ್ದರೂ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ಇದುವರೆಗೂ ನೀರು ತಲುಪದಿರುವ ಹಿನ್ನೆಲೆಯಲ್ಲಿ ಗುರುವಾರ ಹೊಳೆಸಿರಿಗೆರೆಯಲ್ಲಿ ಕೊನೆ ಭಾಗದ ರೈತರ ಮಹತ್ವದ ಸಭೆಯ ನಡೆಯಿತು.

ಸಭೆಯಲ್ಲಿ ಸುದೀರ್ಘ ಚರ್ಚೆ ಬಳಿಕ ರೈತರು ಹಾಗೂ ಜನಪ್ರತಿನಿಧಿಗಳೂ ಸೇರಿ 3 ನಿರ್ಣಯಗಳನ್ನು ತೆಗೆದುಕೊಂಡರು.

**ನಿರ್ಣಯ - 1 :** ಸರ್ಕಾರ, ಅಪ್ಪರ್ ಭದ್ರಾ ಯೋಜನೆಗೆ ಹರಿಸುವ ಸಂಪೂರ್ಣ ನೀರನ್ನು ತುಂಗಾ ಜಲಾಶಯದಿಂದ ಭದ್ರಾ ಜಲಾಶಯಕ್ಕೆ ಲಿಫ್ಟ್ ಮಾಡಬೇಕು.

**ನಿರ್ಣಯ - 2 :** ಭದ್ರಾ ನಾಲೆಗೆ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ಹೈಕೋರ್ಟ್ ನೀಡಿರುವ ಆದೇಶವನ್ನು ಸರ್ಕಾರ ಕೂಡಲೇ ಜಾರಿಗೊಳಿಸಬೇಕು.

**ನಿರ್ಣಯ - 3:** ಭೈರನಪಾದ ಏತ ನೀರಾವರಿ ಯೋಜನೆಯ ಜೊತೆಗೆ ಇನ್ನೆರಡು ಏತ ನೀರಾವರಿ ಯೋಜನೆಗಳನ್ನು ಸರ್ಕಾರ ಹಂತ ಹಂತವಾಗಿ ಅನುಷ್ಠಾನಗೊಳಿಸಬೇಕು.

ಒಂದು ವೇಳೆ ಸರ್ಕಾರ ಈ ನಿರ್ಣಯಗಳಿಗೆ ಸ್ಪಂದಿಸದಿದ್ದರೆ, ಮುಂದಿನ ದಿನಗಳಲ್ಲಿ ಹರಿಹರ ತಾಲ್ಲೂಕಿನಲ್ಲಿ ಸರ್ಕಾರದ ಯೋಜನೆಗಳಿಗೆ ಅಸಹಕಾರ ಚಳುವಳಿ ನಡೆಸುವುದಾಗಿಯೂ ಸಭೆ ನಿರ್ಣಯಿಸಿತು.

ಈ ಎಲ್ಲಾ ನಿರ್ಣಯಗಳನ್ನು ಶಾಸಕ ಬಿ.ಪಿ. ಹರೀಶ್ ಅವರ ಮೂಲಕ ಸಭೆ ತಿಳಿಸಿತು.

**ಸಭೆಯ ವಿವರ :** ಸಭೆಯ ಆರಂಭದಲ್ಲಿ ಮಾತನಾಡಿದ ಹೊಳೆಸಿರಿಗೆರೆಯ ಎರೇಸೀಮೆ ಹಾಲೇಶ್ ಅವರು, ನೀರು ಹರಿಹರ ಕ್ಷೇತ್ರದ ಶಾಸಕರಾಗಿ ನಮಗೆ ನೀರು ತಲುಪಿಸುವ ಬಗ್ಗೆ ಹೋರಾಟ ಮಾಡುವುದನ್ನು ಬಿಟ್ಟು, ಭರಮ ಸಾಗರದಲ್ಲಿ ನಡೆದ ತರಳಬಾಳು ಹುಣ್ಣಿಮೆಯಲ್ಲಿ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ಎಂದು ಶ್ರೀಗಳಿಗೆ ಮನವಿ ಮಾಡಿದ್ದು, ಸರಿಯೇ ? ಎಂದು ಬಿ.ಪಿ.ಹರೀಶ್ ಅವರನ್ನು ಪ್ರಶ್ನಿಸಿದರು.

> **ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ಹೋದರೆ ರೈತರು ಧಮಕಿ ಹಾಕುತ್ತಾರೆ. ನೀರಿನ ನಿರ್ವಹಣೆ ಮಾಡಲು ಸಿಬ್ಬಂದಿ ಕೊರತೆ ಇದೆ.**
>
> **- ಎಇಇ ಧನಂಜಯ**

ನಿಮ್ಮನ್ನು ಶಾಸಕರನ್ನಾಗಿ ಮಾಡಿದ್ದು ನಾವು. ನೀವು ನಮ್ಮ ತಾಲ್ಲೂಕಿನ (2ನೇ ಪುಟಕ್ಕೆ)

## ಖಾಸಗಿ ಸಂಸ್ಥೆ ಮೊಬೈಲ್ ಆಪ್‌ನಲ್ಲಿ ಆಧಾರ್ ಗುರುತಿಗೆ ಅವಕಾಶ

ನವದೆಹಲಿ,ಫೆ. 27 - ಖಾಸಗಿ ಸಂಸ್ಥೆಗಳ ಮೊಬೈಲ್ ಆಪ್‌ನಲ್ಲಿ ಆಧಾರ್ ಮೂಲಕ ಮುಖ ಗುರುತು ಖಚಿತ ಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಆಪ್‌ಗಳ ಮೂಲಕ ಗ್ರಾಹಕರು ಸೇವೆಗಳನ್ನು ಪಡೆಯು ವುದು ಸುಲಭಗೊಳಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ರೀತಿಯ ವ್ಯವಸ್ಥೆ ಜಾರಿಗೆ ತರಲು ಮಾರ್ಗಸೂಚಿಯನ್ನು ರೂಪಿಸಲಾಗಿದೆ. ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಆಧಾರ್ ಆಡಳಿತ ಪೋರ್ಟಲ್ ಮೂಲಕ ಈ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ.

## ಜುಮ್ಮಾಪುರ : 60 ಅಡಿ ಆಳದ ಬಾವಿಗೆ ಬಿದ್ದ ಯುವಕನ ರಕ್ಷಣೆ



ದಾವಣಗೆರೆ, ಫೆ. 27 - ತಾಲ್ಲೂಕಿನ ಜುಮ್ಮಾಪುರದಲ್ಲಿ 60 ಅಡಿ ಆಳದ ಬಾವಿಗೆ ಆಕಸ್ಮಿಕವಾಗಿ ಬಿದ್ದು ಸೊಂಟಕ್ಕೆ ಪೆಟ್ಟು ಮಾಡಿಕೊಂಡಿದ್ದ ವ್ಯಕ್ತಿಯನ್ನು ಅಗ್ನಿಶಾಮಕ ಮತ್ತು ತುರ್ತುಸೇವಾ ಇಲಾಖೆಯ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ. ಜುಮ್ಮಾಪುರದ ಕುಮಾರ್ ಎಂಬುವರು ಬುಧವಾರ ರಾತ್ರಿ ಗ್ರಾಮಕ್ಕೆ ತೆರಳುವಾಗ ರಸ್ತೆ ಬದಿಯ ಬಾವಿಗೆ ಬಿದ್ದಿದ್ದರು. ಬಾವಿ ಖಾಲಿ ಇರುವುದರಿಂದ ಸೊಂಟ, ಬೆನ್ನುಮೂಳೆಗೆ ಬಲವಾದ ಪೆಟ್ಟುಬಿದ್ದು ನರಳುತ್ತಿದ್ದರು. ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಮತ್ತು ತುರ್ತು ಸೇವಾ ಸಿಬ್ಬಂದಿ ಏಣಿಯ ಸಹಾಯದಿಂದ ಬಾವಿಗೆ ಇಳಿದಿದ್ದಾರೆ. ಗಾಯಗೊಂಡಿದ್ದ ವ್ಯಕ್ತಿಯನ್ನು ಉಪಚರಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ನಾಗೇಶ್, ಸಿಬ್ಬಂದಿಗಳಾದ ಭೀಮರಾವ್, ಪ್ರೇಮಾನಂದ ಶೆಟ್ಟಿ, ಸುಭಾನ್, ಪ್ರದೀಪ್ ಕುಮಾರ್, ಪರಶುರಾಮ ಪೂಜಾರ, ಶಿವರಾಜ್ ಜಮಖಂಡಿ, ಗೋಪಾಲ್ ದಮಣೇಕರ, ಗಂಗಾ ನಾಯ್ಕ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ಲಿಂಗಾಯತರ ಒಡೆದು ಆಳುವ ಕೆಲಸದ ಹಿಂದೆ ಕೆಟ್ಟ ಅಜೆಂಡಾ.!

**ಜಾಗತಿಕ ಲಿಂಗಾಯತ ಮಹಾಸಭಾ ಕಾರ್ಯಾಧ್ಯಕ್ಷ ಸಚಿವ ಎಂ.ಬಿ.ಪಾಟೀಲ್ ಆರೋಪ**

ಬೆಂಗಳೂರು,ಫೆ.27- ರಾಜ್ಯದಲ್ಲಿ ಲಿಂಗಾಯತರನ್ನು ಒಡೆದು ಆಳುವ ಒಂದು ಅಜೆಂಡಾ ಕೆಲಸ ಮಾಡುತ್ತಿದ್ದು, ಸಮುದಾಯ ಸಂಘಟಿತ ಮತ್ತು ಸತ್ಯ ಪಕ್ಷಪಾತಿಯಾಗಿ ಉತ್ತರಿಸಬೇಕಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾ ಕಾರ್ಯಾಧ್ಯಕ್ಷ ಹಾಗೂ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಕರೆ ನೀಡಿದ್ದಾರೆ.

**'ವಚನ ದರ್ಶನ: ಸತ್ಯ/ಮಿಥ್ಯ'** ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ವಚನಗಳು ಬರದೇ ಇದ್ದಿದ್ದರೆ ಇಂದು ನಾವ್ಯಾರೂ ಇರುತ್ತಿರಲಿಲ್ಲ, ವಚನಗಳ ಬಗೆಗಿನ ಚರ್ಚೆಯನ್ನು ನಾವು ವಿರೋಧಿಸು ವುದಿಲ್ಲ, ಆದರೆ, ಅದರ ಹಿಂದೆ ಇರುವ ಕೆಟ್ಟ ಅಜೆಂಡಾ ಸಹಿಸುವುದಿಲ್ಲ ಎಂದರು.

ಈ ದಿಸೆಯಲ್ಲಿ ಲಿಂಗಾಯತ ಸ್ವಾಮೀಜಿ ಗಳು ಮತ್ತು ಮಠಗಳು ಮಾಡಬೇಕಾದ ಕೆಲಸ ಅಗಾಧವಾಗಿದೆ. ವಚನಗಳ ಸ್ವೋಪಜ್ಞತೆ ವಿರೋಧಿಸುವ ವಚನ ದರ್ಶನ ಪುಸ್ತಕಕ್ಕೆ ಲೇಖನ ಬರೆದಿರುವವರೂ ಲಿಂಗಾಯತರೇ, ಅದರ ಬಿಡುಗಡೆ ಕಾರ್ಯಕ್ರಮಗಳು ನಡೆದಿರುವುದು ಕೂಡ ಲಿಂಗಾಯತ ಮಠಗಳಲ್ಲೇ, ಆದರೆ, ಅದನ್ನು ಬಿಡುಗಡೆ ಮಾಡಿದವರು ಮಾತ್ರ ಲಿಂಗಾ ಯತರಲ್ಲ, ಇದು ರಾಜ್ಯದಲ್ಲಿ ಲಿಂಗಾಯತ ಸಮುದಾಯದ ಅವಸ್ಥೆಯಾಗಿದೆ.

ಒಕ್ಕಲಿಗರಲ್ಲಿ 104 ಉಪಪಂಗಡಗಳಿದ್ದರೂ ಒಡಕಿಲ್ಲ, ಆ ಸಮುದಾಯಕ್ಕೆ ಒಬ್ಬರೇ ಸ್ವಾಮೀಜಿ ಮತ್ತು ಒಂದೇ ಅಧಿಕಾರ ಕೇಂದ್ರ. ಆದರೆ, ಲಿಂಗಾಯತರು ಉಪಪಂಗಡಗಳ ಕಿತ್ತಾಟದಲ್ಲಿ ಹರಿದು ಹಂಚಿಹೋಗಿದ್ದಾರೆ.

ರಾಜ್ಯದಲ್ಲಿ ಲಿಂಗಾಯತರ ಜನಸಂಖ್ಯೆ 2 ಕೋಟಿಯಷ್ಟಿದೆ, ಉಪಪಂಗಡಗಳ ಕಚ್ಚಾಟದಿಂದ ಜಾತಿಗಣತಿಯಲ್ಲಿ ನಮ್ಮ ಜನಸಂಖ್ಯೆ 65 ಲಕ್ಷವಷ್ಟೇ ಎಂಬುದಾಗಿ ನಮೂದಿಸಲಾಗಿದೆ (4ನೇ ಪುಟಕ್ಕೆ)

## ಬೇಸಿಗೆ ಮುಗಿವವರೆಗೆ ಪೂರ್ಣ ಹೆಲ್ಮೆಟ್‌ಗೆ ವಿನಾಯತಿ ನೀಡಿ

### ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಹಾಗೂ ಎಸ್ಪಿಗೆ ಮನವಿ: ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ



ದಾವಣಗೆರೆ, ಫೆ.27- ಯಾರೂ ಕಾನೂನಿನ ವಿರೋಧಿಗಳಲ್ಲ. ಈ ನೆಲದ ಕಾನೂನಿಗೆ ಪ್ರತಿಯೊಬ್ಬರೂ ತಲೆಬಾಗಲೇಬೇಕು. ಆದರೆ ತಲೆ ಕೂದಲು ಉದುರುವುದು, ಚರ್ಮ ರೋಗಕ್ಕೆ ತುತ್ತಾಗುವ ಆತಂಕ ಮತ್ತು ವೈಯಕ್ತಿಕ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಬೇಸಿಗೆ ಕಾಲ ಮುಗಿಯುವವರೆಗೆ ಪೂರ್ಣ ಪ್ರಮಾಣದ ಹೆಲ್ಮೆಟ್ ಧರಿಸುವುದು ಕಡ್ಡಾಯ ಬೇಡ. ವಿನಾಯತಿ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರಿಗೆ ಮನವಿ ಮಾಡಲಾಗುವುದು ಎಂದು ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿರುವ ಬಾಸ್ಕೆಟ್ ಬಾಲ್ ಮೈದಾನದಲ್ಲಿ ಇಂದು ಸಂಜೆ ನಡೆದ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೆಲ್ಮೆಟ್ ಕಡ್ಡಾಯ ಕ್ರಮವನ್ನು ಹಿಂಪಡೆದು, ಬೇಸಿಗೆ ಸಂಪೂರ್ಣವಾಗಿ ಮುಕ್ತಾಯದವರೆಗೆ ವಿನಾಯತಿ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರಲ್ಲಿ ಮನವಿ ಮಾಡುವುದಾಗಿ ಅವರು ಹೇಳಿದರು.

ಸಭೆಯಲ್ಲಿ ಉಪಸ್ಥಿತರಿದ್ದ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಕೆ.ಜಿ. ಯಲ್ಲಪ್ಪ, ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಬಣ) ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಕಾಂಗ್ರೆಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶರಾವ್ ಜಾಧವ್, ಪಾಲಿಕೆ ಮಾಜಿ ಉಪ ಮೇಯರ್ ಸೋಗಿ ಶಾಂತಕುಮಾರ್, ಮುಖಂಡರಾದ ಅಯೂಬ್ ಪೈಲ್ವಾನ್, ಎ.ನಾಗರಾಜ್, ಮೈನುದ್ದೀನ್, ಎಸ್. ಮಲ್ಲಿಕಾರ್ಜುನ್, ಮಂಗಳಮ್ಮ, ಕೊಟ್ರಯ್ಯ ಬಸಾಪುರ, ರಾಧೇಶ್ ಜಂಬಗಿ ಸೇರಿದಂತೆ ಅನೇಕರು ಪೂರ್ಣ ಪ್ರಮಾಣದ ಹೆಲ್ಮೆಟ್ ಬಳಕೆಯಿಂದಾಗುವ ಅನಾನುಕೂಲಗಳ ಬಗ್ಗೆ ಮಾತನಾಡಿ, ಬೇಸಿಗೆ ಮುಗಿಯುವವರೆಗೆ ವಿನಾಯತಿ ನೀಡಬೇಕೆಂದು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದರು.

ವಿವಿಧ ಸಂಘಟನೆಗಳ ಮುಖಂಡರಾದ ಜಾಕೀರ್, ಮಹಾಂತೇಶ್, ಸಂತೋಷ್, ಈಶ್ವರ್, ಯುವರಾಜ್ ಇತರರಿದ್ದರು.

> **ಸಭೆಯಲ್ಲಿ ಕೇಳಿ ಬಂದ ಅನಿಸಿಕೆ.......**
>
> **ಪೂರ್ಣ ಹೆಲ್ಮೆಟ್ ಧರಿಸುವುದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು.**
> **ತಲೆ ಕೂದಲು ಉದುರುವುದು, ಚರ್ಮರೋಗ ಬರುವ ಸಾಧ್ಯತೆ ಹೆಚ್ಚು.**
> **ನಗರ ವ್ಯಾಪ್ತಿಯಲ್ಲಿ ಮಾತ್ರ ವಿನಾಯತಿ ಇರಲಿ, ಹೊರವಲಯದಲ್ಲಿ ಪೂರ್ಣ ಹೆಲ್ಮೆಟ್ ಕಡ್ಡಾಯ ಇರಲಿ.**
> **ಹೆಲ್ಮೆಟ್ ಕಡ್ಡಾಯ ನೆಪ ಮಾತ್ರ. ಇದು ಕೂಡ ಒಂದು ಮಾಫಿಯಾ.**
> **ಕಾನೂನು ಪಾಲನೆ ನಮ್ಮ ಕರ್ತವ್ಯ. ಆದರೂ ಮಾನವೀಯತೆ ದೃಷ್ಟಿಯಿಂದ ವಿನಾಯತಿ ನೀಡಿ.**







KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas